ಕನ್ನಡ

# ಸುಗಮಭಾರತಿ

ಆರನೆಯ ಇಯತ್ತೆ



## ಕನ್ನಡ ಸುಗಮಭಾರತಿ ಆರನೆಯ ಇಯತ್ತೆ : ಕ್ಷಮತಾ ವಿಧಾನಗಳು

| ಕ್ಷೇತ್ರಗಳು | ಕ್ಷಮತೆಗಳು |
|---|---|
| ಶ್ರವಣ | ೧. ಸುಲಭವಾದ ಪರಿಚಿತ ಹಾಡು, ಕಥೆ, ಕವಿತೆ, ಸಂವಾದ ಮುಂತಾದವುಗಳನ್ನು ಲಕ್ಷ್ಯಪೂರ್ವಕವಾಗಿ ಆಲಿಸುವುದು.<br>೨. ದೂರದರ್ಶನದ, ಆಕಾಶವಾಣಿಯ ವಾರ್ತೆಗಳನ್ನು, ಶೈಕ್ಷಣಿಕ ಕಾರ್ಯಕ್ರಮಗಳನ್ನು ಕೇಳುವುದು.<br>೩. ಮೌಖಿಕ ಸೂಚನೆ, ಆಜ್ಞೆ, ವಿನಂತಿ, ಪ್ರಶ್ನೆ ಇತ್ಯಾದಿಗಳ ಅರ್ಥ ತಿಳಿದುಕೊಂಡು ಕೇಳುವುದು.<br>೪. ಶಾಲೆಯ ವಿಶಿಷ್ಟ ಪ್ರಸಂಗಗಳಲ್ಲಿ ನೀಡಿದ ಸೂಚನೆ, ಆಜ್ಞೆ, ವಿನಂತಿ ಮತ್ತು ಕೇಳಿದ ಪ್ರಶ್ನೆಗಳಿಗೆ ಸ್ಪಂದಿಸುವುದು. |
| ಭಾಷಣ/ ಸಂಭಾಷಣೆ | ೧. ಮನೆ ಹಾಗೂ ಪರಿಸರದಲ್ಲಿ ಕೇಳಿದ ಕವಿತೆ, ಹಾಡು, ಕಥೆಗಳನ್ನು ತಮ್ಮ ಗೆಳೆಯರ ಮುಂದೆ ಸಾದರಪಡಿಸುವುದು.<br>೨. ಪಠ್ಯಪುಸ್ತಕದಲ್ಲಿಯ ಹಾಡು ಕವಿತೆಗಳನ್ನು ಸುಸ್ಪಷ್ಟವಾಗಿ, ಯೋಗ್ಯ ಧ್ವನಿಯ ಏರಿಳಿತದೊಂದಿಗೆ ಮತ್ತು ಕ್ರಮಬದ್ಧವಾಗಿ ಹಾಡುವುದು. |
| ವಾಚನ | ೧. ಹಾಡು, ಕವಿತೆ, ಕಥೆಗಳನ್ನು ಅಲ್ಲದೆ ವೃತ್ತಪತ್ರಿಕೆ, ಭಿತ್ತಿಪತ್ರಿಕೆಗಳಲ್ಲಿಯ ವಿವರಗಳನ್ನು ತಿಳಿದುಕೊಂಡು ಓದುವುದು.<br>೨. ಪಠ್ಯ ಹಾಗೂ ಪಠ್ಯೇತರ ಪುಸ್ತಕಗಳಲ್ಲಿಯ ಮುದ್ರಿತ ಹಾಗೂ ಹಸ್ತಲಿಖಿತ ವಿವರಗಳನ್ನು ತಿಳಿದುಕೊಂಡು ಪ್ರಕಟವಾಚನ ಮಾಡುವುದು.<br>೩. ಆಯ್ದ ಲೇಖನ ಭಾಗಗಳ ಅರ್ಥ ತಿಳಿದುಕೊಂಡು ಪ್ರಕಟವಾಚನವನ್ನು ನಿರ್ದಿಷ್ಟ ವೇಳೆಯಲ್ಲಿ ಏಕಾಗ್ರತೆಯಿಂದ ಮಾಡುವುದು. ಕ್ರಮವಾಗಿ ವಾಚನದ ಗತಿಯನ್ನು ಹೆಚ್ಚಿಸಿಕೊಳ್ಳುವುದು. |
| ಲೇಖನ | ೧. ಪಠ್ಯಪುಸ್ತಕದಲ್ಲಿಯ ಆಯ್ದ ವಿಶಿಷ್ಟ ಭಾಗದ ಅನುಲೇಖನ ಮಾಡುವುದು.<br>೨. ಲೇಖನದ ನಿಯಮಗಳನ್ನು ತಿಳಿದುಕೊಂಡು 'ಶ್ರುತಲೇಖನ ಮಾಡುವುದು. ಆಗುವ ತಪ್ಪುಗಳ ಕಡೆಗೆ ವಿಶೇಷ ಲಕ್ಷ್ಯವಹಿಸಿ ತಪ್ಪುಗಳನ್ನು ಕೂಡಲೇ ತಿದ್ದಿಕೊಳ್ಳಲು ಪ್ರಯತ್ನಿಸುವುದು.<br>೩. ಆಲಿಸಿದ ಹಾಗೂ ಓದಿದ ಭಾಗದ ಮೇಲೆ ಕೇಳಿದ ಪ್ರಶ್ನೆಗಳಿಗೆ ಸ್ವತ: ಉತ್ತರಗಳನ್ನು ಬರೆಯುವುದು.<br>೪. ಪ್ರಾಣಿ, ಪಾಕ್ಷಿ, ವ್ಯಕ್ತಿಗಳ ಚಿತ್ರಗಳನ್ನು ನೋಡಿ, ಅವುಗಳ ಬಗ್ಗೆ ಸ್ವಲ್ಪದರಲ್ಲಿ ನಿಬಂಧಾತ್ಮಕ ಲೇಖನ ಬರೆಯುವುದು. ಸ್ವಯಂಲೇಖನ ಮಾಡುವುದು. |
| ಅಧ್ಯಯನ ಕೌಶಲಗಳು | ೧. ಹೊಸ ಶಬ್ದ, ವಾಕ್ಯರಚನೆ ಅಲ್ಲದೆ ಹೊಸ ವಿಷಯಗಳ ಕುರಿತು ಆಕಲನ ಮಾಡಿಕೊಳ್ಳುವುದು.<br>೨. ಕೇಳಿ ತಿಳಿದುಕೊಂಡ ವಿಷಯಗಳ ಕುರಿತು ವಿವರಣೆ ಮಾಡುವುದು.<br>೩. ವಾರ್ತೆಗಳ ಪ್ರಮುಖ ಅಂಶಗಳನ್ನು ಬರೆದು ಇಡುವುದು.<br>೪. ಅಪೇಕ್ಷಿತ ಕೃತಿಗಳನ್ನು ನಿರ್ದಿಷ್ಟ ಸಮಯದಲ್ಲಿ ಮಾಡುವ ಕೌಶಲವನ್ನು ಬೆಳೆಸಿಕೊಳ್ಳುವುದು.<br>೫. ಸ್ಪಷ್ಟ ಉಚ್ಚಾರ ಹಾಗೂ ಯೋಗ್ಯ ಧ್ವನಿಯ ಏರಿಳಿತದೊಂದಿಗೆ ಪಠ್ಯೇತರ ಹಾಡು, ಕವಿತೆಗಳನ್ನು ಹಾಡುವುದು. ಕಥೆಗಳನ್ನು ಹೇಳುವುದು.<br>೬. ಪಠ್ಯ ಹಾಗೂ ಪಠ್ಯೇತರ ಹಾಡು, ಕವಿತೆಗಳನ್ನು ರಾಗ, ತಾಳ ಮತ್ತು ಲಯದೊಂದಿಗೆ ಹಾಡುವುದು. ಹಸ್ತಲಿಖಿತ ಹಾಗೂ ಮುದ್ರಿತ ವಿವರಗಳನ್ನು ಯೋಗ್ಯ ಉಚ್ಚಾರದೊಂದಿಗೆ ಓದುವುದು.<br>೭. ಮೌನವಾಚನದ ಗತಿಯನ್ನು ಹೆಚ್ಚಿಸಿಕೊಳ್ಳುವುದು. ಶ್ರುತಲೇಖನದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುವುದು. |
| ವ್ಯಾಕರಣ | ೧. ನಾಮಪದ ಹಾಗೂ ಸರ್ವನಾಮಗಳ ಬಗ್ಗೆ ತಿಳಿದುಕೊಂಡು ವಾಕ್ಯದಲ್ಲಿ ಉಪಯೋಗಿಸುವುದು.<br>೨. ಲಿಂಗ, ವಚನ, ಇವುಗಳ ಮಾಹಿತಿ ಮಾಡಿಕೊಂಡು ವಿಷಯಗಳನುಸಾರ ಜೋಡಿಗಳನ್ನು ಸರಿಯಾಗಿ ಹೊಂದಿಸಿ ಬರೆಯುವುದು. |

ಮಂಜೂರಿ ಕ್ರಂ.: ಜಾ.ಕ್ರ. ಮರಾಶೈಸಂಪ್ರಪ/ಅವಿವಿ/ಶಿಪ್ರ/೨೦೧೫-೧೬/೧೬೭೩ ದಿನಾಂಕ- ೦೬/೦೪/೨೦೧೬



ಕನ್ನಡ

# ಸುಗಮಭಾರತಿ

## ಆರನೆಯ ಇಯತ್ತೆ

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ-೪

ಪ್ರಥಮಾವೃತ್ತಿ : ೨೦೧೬
ಪುನರ್ಮುದ್ರಣ : ೨೦೧೭

© ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ – ೪

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳವು ಈ ಪುಸ್ತಕದ ಎಲ್ಲ ಹಕ್ಕುಗಳನ್ನು ಕಾಯ್ದಿರಿಸಿದೆ. ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಈ ಪುಸ್ತಕದ ಯಾವುದೇ ಭಾಗವನ್ನು ಉದ್ಧೃತಗೊಳಿಸಬಾರದು.

**ಕನ್ನಡ ಭಾಷಾ ಸಮಿತಿ :**
ಡಾ. ಕೆ.ಕೆ. ಪತ್ತಾರ, ಅಧ್ಯಕ್ಷ,
ಶ್ರೀ. ಶಿವಬಾಳ ಕೆ. ಗೋಲಿ, ಸದಸ್ಯ
ಶ್ರೀ. ಬಿ. ಎಸ್. ಕಾಪಸೆ
ಶ್ರೀ. ಹಣಮಂತ ಎಮ್. ಕುಂಭಾರ, ಸದಸ್ಯ
ಶ್ರೀಮತಿ. ಜಯದೇವಿ ಆಯ್. ಉಕ್ಕಲಿ, ಸದಸ್ಯೆ
ಡಾ. ಸದಾನಂದ ಎಂ. ಬಿಳ್ಳೂರ, ಸದಸ್ಯ-ಸಚಿವರು

**ಕನ್ನಡ ಅಭ್ಯಾಸಗಟ ಸದಸ್ಯರು :**
ಶ್ರೀ. ಜಿ. ಡಿ. ಮೋರೆ
ಶ್ರೀ. ಟಿ. ವ್ಹಿ. ಸದಾನಂದ
ಶ್ರೀ. ಶ್ರೀಶೈಲ ಜಿ. ಅವಟಿ

**ಸಂಯೋಜನ ಪ್ರಮುಖ :**
ಡಾ. ಸದಾನಂದ ಎಂ. ಬಿಳ್ಳೂರ, ವಿಶೇಷಾಧಿಕಾರಿಗಳು ಕನ್ನಡ ಪಾಠ್ಯಪುಸ್ತಕ ಮಂಡಳ, 'ಬಾಲಭಾರತಿ', ಪುಣೆ – ೪
ಶ್ರೀ. ಆರ್. ಎಮ್ ಗಣಾಚಾರಿ, ವಿಷಯ ಸಹಾಯಕ ಕನ್ನಡ

**ಚಿತ್ರಕಾರ :** ಶ್ರೀ. ಕಿಶೋರ ಗಿರಧಾರಿ

**ಮುಖಪುಟ :** ಶ್ರೀ. ಕಿಶೋರ ಗಿರಧಾರಿ

**ಅಕ್ಷರ ಜೋಡಣೆ :** ಕ್ವಿಂಟೆಕ್ಸ್, ಫೋರ್ಟ್, ಮುಂಬಯಿ

**ನಿರ್ಮಿತಿ :**
ಶ್ರೀ. ಸಚ್ಚಿತಾನಂದ ಆಫಳೆ, ಮುಖ್ಯ ನಿರ್ಮಿತಿ ಅಧಿಕಾರಿ
ಶ್ರೀ. ಸಂದೀಪ ಅಜಗಾಂವಕರ, ನಿರ್ಮಿತಿ ಅಧಿಕಾರಿ

**ಕಾಗದ :** ೭೦ ಜಿ. ಎಸ್. ಎಮ್, ಕ್ರಿಮವೋವ್ಹ್

**ಮುದ್ರಣಾದೇಶ :**

**ಮುದ್ರಕ :**

**ಪ್ರಕಾಶಕ :**
ಶ್ರೀ. ವಿವೇಕ ಗೋಸಾವಿ, ನಿಯಂತ್ರಕ,
ಪಾಠ್ಯಪುಸ್ತಕ ನಿರ್ಮಿತಿ ಮಂಡಳ, ಪ್ರಭಾದೇವಿ, ಮುಂಬಯಿ – ೨೫.

# ಭಾರತದ ಸಂವಿಧಾನ

**ಪೀಠಿಕೆ**

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ**
**ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು
ಹಾಗೂ ಅದರ ಸಮಸ್ತ ನಾಗರಿಕರಿಗೆ :

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ
ಮತ್ತು ಉಪಾಸನಾ **ಸ್ವಾತಂತ್ರ್ಯ;**
ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**

ನಿಶ್ಚಿತವಾಗಿ ದೊರೆಯುವಂತೆ ಮಾಡಲು
ಮತ್ತು ವ್ಯಕ್ತಿಗೌರವವನ್ನು

ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು
ಆಶ್ವಾಸನೆ ನೀಡುವ **ಬಂಧುತ್ವವನ್ನು**
ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;

**ನಮ್ಮ ಸಂವಿಧಾನ ಸಭೆಯಲ್ಲಿ**
ಇಂದು ದಿನಾಂಕ ಇಪ್ಪತ್ತಾರನೆಯ ನವ್ಹೆಂಬರ, ೧೯೪೯ ನೆಯ ಇಸವಿ
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ**
**ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

# ಪ್ರಸ್ತಾವನೆ

**‘ರಾಷ್ಟ್ರೀಯ ಅಭ್ಯಾಸಕ್ರಮ ರೂಪರೇಷೆ ೨೦೦೫’** ಮತ್ತು **‘ಬಾಲಕರ ಉಚಿತ ಶಿಕ್ಷಣದ ಅಧಿಕಾರ ಅಧಿನಿಯಮ-೨೦೦೯’** ಇವುಗಳ ಅನುಸಾರವಾಗಿ ರಾಜ್ಯದಲ್ಲಿ **‘ಪ್ರಾಥಮಿಕ ಶಿಕ್ಷಣ ಅಭ್ಯಾಸಕ್ರಮ-೨೦೧೨’**ನ್ನು ಸಿದ್ಧಪಡಿಸಲಾಯಿತು. ಈ ಸರಕಾರಮಾನ್ಯ ಅಭ್ಯಾಸಕ್ರಮವು ೨೦೧೩-೧೪ ಈ ವರ್ಷದಿಂದ ಕ್ರಮೇಣವಾಗಿ ಜಾರಿಯಲ್ಲಿ ಬಂತು. ಈ ಸರಕಾರಮಾನ್ಯ ಅಭ್ಯಾಸಕ್ರಮದ ಮೇಲೆ ಆಧಾರಿತವಾದ ಆರನೆಯ ಇಯತ್ತೆಯ ಕನ್ನಡ ಸುಗಮಭಾರತಿ ಈ ಪಠ್ಯಪುಸ್ತಕವನ್ನು ತಯಾರಿಸಲಾಗಿದೆ. ಈ ಪಠ್ಯಪುಸ್ತಕವನ್ನು ತಮ್ಮ ಕೈಯಲ್ಲಿಡಲು ನಮಗೆ ಆನಂದವೆನಿಸುತ್ತದೆ.

ಪ್ರಾಥಮಿಕ ಶಿಕ್ಷಣದ ವಿವಿಧ ಹಂತಗಳಲ್ಲಿ ವಿದ್ಯಾರ್ಥಿಗಳು ನಿಶ್ಚಿತವಾಗಿ ಪ್ರಾಪ್ತಗೊಳಿಸುವ ಕ್ಷಮತೆಗಳು ಯಾವವು ಎಂಬುದನ್ನು ಅಧ್ಯಯನ-ಅಧ್ಯಾಪನ ಮಾಡುವಾಗ ಸ್ಪಷ್ಟವಾಗಬೇಕೆಂದು, ಭಾಷಾವಿಷಯದ ಅಪೇಕ್ಷಿತ ಕ್ಷಮತೆಗಳ ವಿಧಾನಗಳನ್ನು ಈ ಪಠ್ಯಪುಸ್ತಕದಲ್ಲಿ ಸಮಾವೇಶ ಮಾಡಲಾಗಿದೆ.

ಇಂಗ್ಲಿಷ ಮಾಧ್ಯಮದ ಶಾಲೆಗಳಲ್ಲಿ ಕನ್ನಡ ಮಾತೃಭಾಷೆ ಇರುವ ವಿದ್ಯಾರ್ಥಿಗಳಿಗೆ ಅವರ ಮಾತೃಭಾಷೆಯ ಅರಿವು ಆಗಬೇಕು, ಮಾತೃಭಾಷೆಯಲ್ಲಿ ಸರಿಯಾಗಿ ಮಾತನಾಡಲು ಮತ್ತು ಬರೆಯಲು ಬರಬೇಕೆಂಬ ಸೀಮಿತ ಅಪೇಕ್ಷೆಯನ್ನು ಈ ಪುಸ್ತಕವನ್ನು ಸಿದ್ಧಗೊಳಿಸುವಾಗ ಇಟ್ಟುಕೊಳ್ಳಲಾಗಿದೆ.

ಇಂಗ್ಲಿಷ ಮಾಧ್ಯಮದ ಶಾಲೆಗಳಲ್ಲಿ ಕನ್ನಡ ಕಲಿಸುವ ಎಲ್ಲ ಹಂತದ ಶಿಕ್ಷಕರು, ಶಿಕ್ಷಣ ತಜ್ಞರು ಈ ಪುಸ್ತಕದ ಪಠ್ಯಕಮ್ಮಟದಲ್ಲಿ ನೀಡಿದ ಸೂಚನೆಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಈ ಪುಸ್ತಕಕ್ಕೆ ಅಂತಿಮ ಸ್ವರೂಪವನ್ನು ಕೊಡಲಾಗಿದೆ.

ಕನ್ನಡ ಭಾಷಾ ಸಮಿತಿ ಹಾಗೂ ಅಭ್ಯಾಸಗಟ ಸದಸ್ಯರು, ನಿಮಂತ್ರಿತ ತಜ್ಞರು, ಸಂಬಂಧಿತ ಸಮೀಕ್ಷಕರು, ಹಾಗೂ ಚಿತ್ರಕಾರರು ಇವರೆಲ್ಲರಿಗೆ ಮಂಡಳವು ಮನ:ಪೂರ್ವಕವಾಗಿ ಆಭಾರಿಯಾಗಿದೆ. ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಪಾಲಕರು ಈ ಪುಸ್ತಕವನ್ನು ಸ್ವಾಗತಿಸುವರೆಂದು ಆಶಿಸಿದ್ದೇವೆ.

**(ಡಾ. ಸುನಿಲ ಮಗರ)**

**ಸಂಚಾಲಕ**

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ
ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ

**ಪುಣೆ**

**ದಿನಾಂಕ : ೯ ಮೇ, ೨೦೧೬, ಅಕ್ಷಯ ತೃತಿಯಾ**
**ಭಾರತೀಯ ಸೌರ: ೧೯ ವೈಶಾಖ ೧೯೩೮**

# ಪರಿವಿಡಿ


| ಅನಂ. | ಪಾಠದ ಹೆಸರು | ಲೇಖಕ/ಕವಿಗಳು | ಪುಟ ಸಂಖ್ಯೆ |
|---|---|---|---|
| ೧. | ಕನ್ನಡ ಕಲಿಯಲು ಬಾ ಕಂದಾ (ಕವಿತೆ) | ಬಿ.ಹೆಚ್. ಒಡೇರಹಳ್ಳಿ | ೧ |
| ೨. | ನೀಲಿಯಾದ ಹೂವು | ----------- | ೩ |
| ೩. | ಆಮೆ | ಕೃಷ್ಣ ಎಂ.ವ್ವಿ. | ೬ |
| ೪. | ನಮ್ಮ ಊರು (ಕವಿತೆ) | ಗೀತಾ ಬರ್ಲ | ೧೦ |
| ೫. | ಮರುಳ ಸಂದ್ರದ ಸೇತುವೆ | ಜನಪದ | ೧೨ |
| ೬. | ಸತ್ಸಂಗ | ಎಂ.ವಿ. ನಾಗರಾಜರಾವ್ | ೧೬ |
| ೭. | ಬೆಳಗಿನಹಾಡು (ಕವಿತೆ) | ಬಿ.ಎ. ಸನದಿ | ೧೯ |
| ೮. | ಅಜ್ಜಿಯ ಸಲಹೆ | ----------- | ೨೧ |
| ೯. | ಮೇಡಂ ಕಾಮಾ | ಆರ್.ಡಿ.ಜಿ. | ೨೪ |
| ೧೦. | ಮೈಸೂರು ದಸರಾ (ಕವಿತೆ) | ಎಂ. ವಿವೇಕ್ ಭರಣಿ | ೨೮ |
| ೧೧. | ಖೋ ಖೋ ಆಟ | ಶಿವಶಂಕರ ಅರಳಿಮಟ್ಟಿ | ೩೦ |
| ೧೨. | ಆಲೆಮನೆಯಲ್ಲೊಂದು ದಿನ | ----------- | ೩೩ |
| ೧೩. | ನಮ್ಮ ಅಪ್ಪ (ಕವಿತೆ) | ಎಂ. ಎಂ. ಸಂಗಣ್ಣವರ | ೩೭ |

# ೧ ಕನ್ನಡ ಕಲಿಯಲು ಬಾ ಕಂದಾ



ಕನ್ನಡ ನಾಡಿನ ಕನ್ನಡ ಮಕ್ಕಳೇ
ಕನ್ನಡ ಭಾಷೆಯು ಬಲು ಚೆಂದ
ಕನ್ನಡ ಸವಿನುಡಿ ನಾಡಿನ ಮುನ್ನಡಿ
ಕನ್ನಡ ಕಲಿಯಲು ಬಾ ಕಂದ ||

ಕನ್ನಡ ಶ್ರೀಗಂಧ ನಾಡೆಲ್ಲ ಸುಗಂಧ
ಕನ್ನಡ ನಾಡಿನ ಓ ಕಂದಾ
ಕನ್ನಡ ಹಸಿರು ಬಾಳಿಗೆ ಉಸಿರು
ಕನ್ನಡ ಕಲಿಯಲು ಬಾ ಕಂದ ||

ತಾಯಿಯ ಸವಿನುಡಿ ಬಾಳಿಗೆ ಮುನ್ನುಡಿ
ಕನ್ನಡ ಕವಿನುಡಿ ಬಲು ಚೆಂದ
ಅಕ್ಷರ ಅಂದ...... ಓದಲು ಚೆಂದ
ಕನ್ನಡ ಕಲಿಯಲು ಬಾ ಕಂದ ||

ನಾಡನು ಕಾಣಲು..... ತಾಯಿಯ ನೋಡಲು
ಕನ್ನಡ ಕನ್ನಡಿ ಓ ಕಂದಾ
ಕನ್ನಡ ಸಂಸ್ಕೃತಿ..... ಬಾಳಿನ ಉನ್ನತಿ
ಚೆನ್ನುಡಿ ಬೆಳೆಸಲು ಬಾ ಕಂದ ||

ನಮ್ಮಯ ಕನ್ನಡ ಕಸ್ತೂರಿ ಕನ್ನಡ
ನಾಡಿನ ಮಕ್ಕಳ ಅನುಬಂಧ
ಸುಂದರ ಕನ್ನಡ..... ಬಾಳಿನ ಚಂದಿರ
ಕನ್ನಡ ಕಲಿಯಲು ಬಾ ಕಂದ ||

– ಬಿ.ಹೆಚ್. ಒಡೇರಹಳ್ಳಿ

**ಶಬ್ದಗಳ ಅರ್ಥ**

ಸವಿನುಡಿ - ಒಳ್ಳೆಯನುಡಿ; ಸುಗಂಧ - ಒಳ್ಳೆಯವಾಸನೆ, ಉನ್ನತಿ - ಏಳ್ಗೆ, ಪ್ರಗತಿ;

***ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.**

**ಮುನ್ನುಡಿ** ________ **; ಸಂಸ್ಕೃತಿ** ________ **; ಅನುಬಂಧ** ________

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಯಾವ ಭಾಷೆಯು ಬಲು ಚೆಂದ?

________________________

ಆ) ಯಾವುದರಿಂದ ನಾಡೆಲ್ಲ ಸುಗಂಧವಾಗಿದೆ?

________________________

ಇ) ಬಾಳಿಗೆ ಯಾವುದು ಮುನ್ನುಡಿಯಾಗಿದೆ?

________________________

**ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

**ಅ)** ________________

**ಉತ್ತರ** ________________

**ಆ)** ________________

**ಉತ್ತರ** ________________

**ಪ್ರಶ್ನೆ ೩) ಕವಿತೆಯ ಬಿಟ್ಟ ಸಾಲುಗಳನ್ನು ಪೂರ್ಣಮಾಡಿರಿ.**

ತಾಯಿಯ ಸವಿನುಡಿ ........

...............................

...............................


.................... ಬಾಕಂದಾ

**ಉಪಕ್ರಮ :** ಕೆಳಗಿನ ಚಿತ್ರಗಳನ್ನು ಗಮನಿಸಿ ಕನ್ನಡ ನಾಡಿನ ಸಂಸ್ಕೃತಿಯನ್ನು ಶಿಕ್ಷಕರಿಂದ/ಪಾಲಕರಿಂದ ಕೇಳಿ ತಿಳಿದುಕೊಳ್ಳಿರಿ.



**ಮಾವಿನ ಮಿಡಿ ಅಂದ, ಕನ್ನಡ ನುಡಿ ಚಂದ**

# ೨ ನೀಲಿಯಾದ ಹೂವು



''ಹೂವು ಬೇಕೇ ಹೂವು
ಮಲ್ಲಿಗೆ ಸಂಪಿಗೆ ಹೂವು
ಬಣ್ಣ ಬಣ್ಣದ ಹೂವು''

ಎನ್ನುತ ಹೂವು ಮಾರುವವಳು ಓಣಿಯಲ್ಲಿ ಬಂದಳು. ಹೂವುಗಳನ್ನು ನೋಡಿ ಭಾರತಿಯು, ''ಅಮ್ಮಾ, ನನಗೆ ಹೂವು ಬೇಕು,'' ಎಂದು ತಾಯಿಗೆ ಹೇಳಿದಳು. ''ಭಾರತಿ, ನಿನಗೆ ಯಾವ ಹೂವು ಬೇಕು?'' ಎಂದು ತಾಯಿ ಕೇಳಿದಳು. ''ನನಗೆ ಬಿಳಿ ಗುಲಾಬಿ ಬೇಕು'' ಎಂದಳು ಭಾರತಿ.

ತಾಯಿಯು ಭಾರತಿಗೆ ಒಂದು ಬಿಳಿಯ ಗುಲಾಬಿಯನ್ನು ಕೊಡಿಸಿದಳು. ಭಾರತಿ ಹೂವನ್ನು ಕೈಯಲ್ಲಿ ಹಿಡಿದು ಸಂತೋಷದಿಂದ ಕುಣಿದಾಡಿದಳು.

ಅಣ್ಣನು ಹೂವನ್ನು ನೋಡಿದರೆ ತೆಗೆದುಕೊಳ್ಳುವನು. ಅವನಿಗೆ ಕಾಣದಂತೆ ಎಲ್ಲಿ ಇಡಲಿ ? ಎಂದು ಭಾರತಿ ಯೋಚಿಸಿದಳು. ಹಾಗೆಯೇ ಇಟ್ಟರೆ ಒಣಗುತ್ತದೆ, ಎಂದು ದೌತಿಯನ್ನು ತೆಗೆದುಕೊಂಡಳು. ಅದರಲ್ಲಿ ನೀರು ಹಾಕಿ ಹೂವನ್ನು ಇಟ್ಟಳು. ಕಪಾಟಿನ ಹಿಂದೆ ಅದನ್ನು ಬಚ್ಚಿಟ್ಟು ಶಾಲೆಗೆ ಹೋದಳು.

ಮರುದಿನ ಭಾರತಿಗೆ ಹೂವಿನ ನೆನಪಾಯಿತು. ಓಡಿಹೋಗಿ ಹೂವನ್ನು ಹೊರಗೆ ತಂದಳು. ''ಅಯ್ಯೋ, ನನ್ನ ಹೂವನ್ನು ಅಣ್ಣನು ತೆಗೆದುಕೊಂಡಿದ್ದಾನೆ. ಇಲ್ಲಿ ನೀಲಿ ಹೂವನ್ನು ಇಟ್ಟಿದ್ದಾನೆ. ನನಗೆ ಬಿಳಿ ಗುಲಾಬಿ ಬೇಕು'' ಎಂದು ಅಳತೊಡಗಿದಳು.

ಆಗ ತಾಯಿಯು ಭಾರತಿಯನ್ನು ಹತ್ತಿರ ಕರೆದು ಹೂವನ್ನು ನೋಡಿ, ''ಭಾರತಿ, ಹೂವನ್ನು ದೌತಿಯಲ್ಲಿ ಇಟ್ಟಿದ್ದೆ, ಅಲ್ಲವೇ? ದೌತಿಯಲ್ಲಿ ನೀಲಿ ಬಣ್ಣದ ನೀರು ಇದೆ. ಆ ಬಣ್ಣದ ನೀರನ್ನು ಹೀರಿಕೊಂಡು ಬಿಳಿ ಹೂವು ನೀಲಿಯಾಗಿದೆ. ಈ ಹೂವು ನಿನ್ನದೇ'' ಎಂದಳು. ಭಾರತಿಗೆ ಆನಂದವಾಯಿತು. ''ಅಣ್ಣಾ, ನೋಡು ನನ್ನ ಬಿಳಿ ಗುಲಾಬಿ ನೀಲಿಯಾಗಿದೆ!'' ಎನ್ನುತ ಅಣ್ಣನಿಗೆ ತೋರಿಸಲು ಓಡಿದಳು. ಆಗ ಅಣ್ಣನು 'ಸಸ್ಯಗಳು ಬೇರಿನ ಸಹಾಯದಿಂದಲೇ ನೀರು, ಆಹಾರವನ್ನು ಪಡೆದುಕೊಳ್ಳುತ್ತವೆ' ಎಂಬ ವಿಚಾರವನ್ನು ತಂಗಿಗೆ ತಿಳಿಸಿದನು.

## ಅಭ್ಯಾಸ

**ಶಬ್ದಗಳ ಅರ್ಥ**

ಓಣಿ – ಕೇರಿ, ಗಲ್ಲಿ; ಯೋಚಿಸು – ವಿಚಾರಮಾಡು; ಆನಂದ – ಸಂತೋಷ

***ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.**

**ದೌತಿ** __________ **; ಬಚ್ಚಿಡು** __________

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಭಾರತಿ ತಾಯಿಗೆ ಏನು ಹೇಳಿದಳು ?

______________________________

ಆ) ತಾಯಿ ಭಾರತಿಗೆ ಏನು ಕೊಡಿಸಿದಳು?

______________________________

ಇ) ಬಿಳಿ ಗುಲಾಬಿ ನೀಲಿ ಏಕೆ ಆಯಿತು ?

______________________________

**ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

**ಅ)** ______________________________

**ಉತ್ತರ** ______________________________

**ಆ)** ______________________________

**ಉತ್ತರ** ______________________________

**ಪ್ರಶ್ನೆ ೩) ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು.**

ಅ) ''ಅಮ್ಮಾ ನನಗೆ ಹೂವು ಬೇಕು''

______________________________


ಆ) ''ಹೂವು ಬೇಕೇ ಹೂವು!''

______________________________

ಇ) ''ನಿನಗೆ ಯಾವ ಹೂವು ಬೇಕು?''

______________________________

**ಉಪಕ್ರಮ :** ಕೆಳಗಿನ ಚಿತ್ರಗಳನ್ನು ನಿರೀಕ್ಷಿಸಿರಿ. ಸಸಿ ದೊಡ್ಡದಾಗುತ್ತ ಹೋದಬಗ್ಗೆ ಎರಡು ಸಾಲುಗಳಲ್ಲಿ ಬರೆಯಿರಿ.



## ಮಾಡಿ ಕಲಿ, ನೋಡಿ ತಿಳಿ

**ವ್ಯಾಕರಣ :**

### ನಾಮಪದ

ಕೆಳಗಿನ ವಾಕ್ಯಗಳಲ್ಲಿ ಗೆರೆ ಹೊಡೆದ ಶಬ್ದಗಳು ಮನುಷ್ಯ, ಪ್ರಾಣಿ, ಊರು ಹಾಗೂ ವಸ್ತುಗಳ ಹೆಸರುಗಳನ್ನು ಸೂಚಿಸುತ್ತವೆ. ಈ ಹೆಸರುಗಳಿಗೆ 'ನಾಮಪದ' ಎನ್ನುವರು.

೧) ರವಿಯು ಚೆಂಡನ್ನು ಎಸೆಯುತ್ತಾನೆ.

೨) ಕೋಳಿ ಕೂಗಿತು.

೩) ಪುಣೆಯಲ್ಲಿ ಗಣಪತಿಯ ಮಂದಿರವಿದೆ.

೪) ಪುಸ್ತಕವು ಬಹಳ ಸುಂದರವಾಗಿದೆ.

೫) ವಿಮಾನ ಆಕಾಶದಲ್ಲಿ ಹಾರಿತು.

# ೩ ಆಮೆ

ಅದೊಂದು ಮಳೆಗಾಲದ ದಿನ. ಸಂಜೆಯ ಸಮಯ. ಸುರಿಯುತ್ತಿರುವ ಮಳೆ ಅದೇ ತಾನೇ ಕಡಿಮೆಯಾಗಿತ್ತು. ಆರನೆಯ ವರ್ಗದ ವಿದ್ಯಾರ್ಥಿ ರಾಜು ಶಾಲೆಯಿಂದ ಮನೆಗೆ ಬಂದ. ಅವನು ಬರುವಾಗ ಒಂದು ಚೀಲದಲ್ಲಿ ಆಮೆಯ ಮರಿಯೊಂದನ್ನು ತಂದಿದ್ದನು. ಅದನ್ನು ಮನೆಯವರಿಗೆಲ್ಲ ತೋರಿಸಿದನು. ''ನಾನು ಶಾಲೆ ಬಿಟ್ಟು ಬರುವಾಗ ಈ ಮರಿ ಮಳೆಯ ನೀರಿನಲ್ಲಿ ಕಾಣಿಸಿತು. ನನಗೆ ಕನಿಕರವೆನಿಸಿ ಅದನ್ನು ಎತ್ತಿಕೊಂಡು ಬಂದೆ'' ಎಂದು ಹೇಳಿದನು. ''ಇದು ಬಹಳ ಮುದ್ದಾಗಿದೆಯಲ್ಲ!'' ಎಂದು ತಾಯಿ ಅಂದಳು. ರಾಜು ನಿನ್ನ ಪ್ರಾಣಿದಯೆ ಗುಣಕ್ಕೆ ನಾನು ಮೆಚ್ಚಿದೆನು. ಈ ಗುಣವು ಅನೇಕ ಜೀವಿಗಳ ಜೀವನಕ್ಕೆ ಆಧಾರವಾಗಿರಲಿ. ಆದರೆ ಸ್ವತಂತ್ರವಾಗಿರುವ ಈ ಪ್ರಾಣಿಯನ್ನು ಹಿಡಿದು ತಂದು ಸಾಕುವುದು ಅಪರಾಧ. ಆದ್ದರಿಂದ ಇದನ್ನು ಸ್ವತಂತ್ರವಾಗಿರಲು ಬಿಟ್ಟುಬಿಡು ಎಂದು ತಂದೆ ಹೇಳಿದನು. ಅಪ್ಪಾ ಈಗ ಇದನ್ನು ಹೊರಗೆ ಬಿಟ್ಟರೆ ಏನಾದರೂ ಅಪಾಯವಾಗಬಹುದಲ್ಲವೇ? ಆದ್ದರಿಂದ ಇದನ್ನು ಬಿಟ್ಟುಬಿಡಲು ನನ್ನ ಮನಸ್ಸು ಒಪ್ಪದು ಎಂದನು ರಾಜು. ಹಾಗಾದರೆ ಇದನ್ನು ಊರ ಮುಂದಿರುವ ಬಾವಿಗೆ ಬಿಟ್ಟು ಬಿಡು, ಅಲ್ಲಿ ಅದಕ್ಕೆ ಯಾವ ತೊಂದರೆಯೂ ಆಗುವುದಿಲ್ಲ. ಮತ್ತೆ ದಿನಾಲು ಅದನ್ನು ನೀನು ನೋಡಬಹುದು ಎಂದು ತಂದೆ ಹೇಳಿದರು.



ಕೆಲವು ದಿನಗಳು ಗತಿಸಿದವು. ಸುತ್ತಲಿನ ಗ್ರಾಮಗಳಲ್ಲಿ ಕಾಲರಾ ಮತ್ತು ಮಲೇರಿಯಾ ರೋಗಗಳು ಹಬ್ಬಿದವು. ರೋಗಗಳನ್ನು ತಡೆಗಟ್ಟಲು ವೈದ್ಯರ ತಂಡಗಳು ಊರೂರಗಳಿಗೆ ಭೇಟಿ ಕೊಟ್ಟು ಜನರಿಗೆ ಸ್ವಚ್ಛತೆ, ಸ್ವಚ್ಛ ನೀರು, ಬಿಸಿ ಆಹಾರ ಮುಂತಾದ ಮುಂಜಾಗ್ರತೆಯ ಕ್ರಮಗಳ ಬಗ್ಗೆ ಮಾಹಿತಿ ನೀಡತೊಡಗಿದರು. ಅದರಂತೆ ಒಂದು ದಿನ ಈ ಊರಿಗೂ ವೈದ್ಯರ ತಂಡ ಬಂದಿತು. ಗ್ರಾಮ ಪಂಚಾಯತ ಆಫೀಸಿನ ಎದುರಿಗೆ ಸಭೆ ಇಟ್ಟುಕೊಳ್ಳಲಾಯಿತು. ಸಭೆಯಲ್ಲಿ ಊರಿನ ಎಲ್ಲ ನಾಗರಿಕರೂ, ಶಾಲೆಯ ಮಕ್ಕಳು ಉಪಸ್ಥಿತರಿದ್ದರು.



ನಾವು ನಮ್ಮ ಮನೆಯನ್ನು, ಪರಿಸರವನ್ನು ಸ್ವಚ್ಛವಾಗಿರಸಬೇಕು. ಎಲ್ಲಿಯೂ ನೀರು ನಿಲ್ಲದಂತೆ ಎಚ್ಚರಿಕೆ ವಹಿಸಬೇಕು. ನೀರು ಒಂದೆಡೆಯೇ ನಿಂತುಕೊಂಡರೆ ಅಲ್ಲಿ ಸೊಳ್ಳೆಗಳು ಹುಟ್ಟುತ್ತವೆ. ಅವುಗಳಿಂದ ನಮಗೆ ಹಲವಾರು ರೋಗಗಳು ಬರುತ್ತವೆ. ಸ್ವಚ್ಛವಾದ ಹಾಗೂ ಬಿಸಿಯಾದ ಆಹಾರ ಸೇವನೆ ಮಾಡಬೇಕು. ನೀರನ್ನು ಕುದಿಸಿ ಆರಿಸಿ ಕುಡಿಯಬೇಕು. ಸುತ್ತಲಿನ ಗ್ರಾಮಗಳಲ್ಲಿ ಬಹಳಷ್ಟು ಜನರಿಗೆ ಮಲೇರಿಯಾ ಮತ್ತು ಕಾಮಾಲೆ ರೋಗಗಳು ಉಂಟಾಗಿವೆ. ನಿಮ್ಮ ಗ್ರಾಮದ ಜನರು ಸುದೈವಿಗಳು. ನಿಮಗೆ ಈ ರೋಗಗಳ. ಸ್ಪರ್ಶವಾಗಿಲ್ಲ ಆದರೂ ಇಂದು ನಾವು ಕುಡಿಯುವ ನೀರಿಗೆ ಬ್ಲೀಚಿಂಗ ಪೌಡರ್ ಹಾಕುತ್ತೇವೆ. ನೀವು ಭಯಪಡುವ ಕಾರಣವಿಲ್ಲ ಎಂದು ವೈದ್ಯರು ಹೇಳಿದರು. ತಕ್ಷಣ ರಾಜು ಎದ್ದು ನಿಂತು, ಸರ್ ನೀವು ಭಾವಿಯಲ್ಲಿ ಔಷಧ ಹಾಕಿದರೆ ನೀರಿನಲ್ಲಿರುವ ಆಮೆಗೆ ಏನಾದರೂ ತೊಂದರೆ ಆಗುತ್ತದೆಯೇ? ಎಂದು ಕೇಳಿದನು. ಏನು, ನಿಮ್ಮೂರ ಬಾವಿಯಲ್ಲಿ ಆಮೆ ಇದೆಯೇ! ಎಂದು ವೈದ್ಯರು ಕೇಳಿದರು. ಹೌದು ಸರ್ ನಾನು ಶಾಲೆಯಿಂದ ಬರುವಾಗ ಆಮೆ ಮರಿ ಸಿಕ್ಕಿತು. ಅದನ್ನು ತಂದು ಬಾವಿಯಲ್ಲಿ ಬಿಟ್ಟಿದ್ದೇನೆ. ಅದು ಈಗ ಬೆಳೆದು ದೊಡ್ಡದಾಗಿದೆ. ಎಂದನು ರಾಜು. ವೈದ್ಯಕೀಯ ಅಧಿಕಾರಿಗಳು ರಾಜುವಿನ ಬಳಿಗೆ ಬಂದು ರಾಜುವಿನ ಬೆನ್ನು ತಟ್ಟಿದರು. ಸುತ್ತಲಿನ ಗ್ರಾಮಗಳಲ್ಲಿ ರೋಗ ಹಬ್ಬಿದೆ, ನಿಮ್ಮ ಊರಿನಲ್ಲಿ ಮಾತ್ರ ಯಾವುದೇ ತೊಂದರೆಯುಂಟಾಗಿಲ್ಲ, ಇದರ ಕಾರಣ ಇಲ್ಲಿಯೇ ಇದೆ. ಕುಡಿಯುವ ನೀರಿನ ಬಾವಿಯಲ್ಲಿ ಆಮೆ ಇದೆ. ಅದು ನೀರಿನಲ್ಲಿರುವ ಕ್ರಿಮಿ ಕೀಟಕಗಳನ್ನು ತಿಂದು ನೀರನ್ನು ಶುದ್ಧಗೊಳಿಸುತ್ತದೆ. ಆಮೆ ನಿಮ್ಮ ಗ್ರಾಮಸ್ಥರ ಆರೋಗ್ಯದ ರಕ್ಷಣೆ ಮಾಡಿದೆ.

ಬಾವಿಗಳಲ್ಲಿ, ಹಳ್ಳಗಳಲ್ಲಿ, ನದಿ, ಕೆರೆಗಳಲ್ಲಿ ಜಲಚರ ಪ್ರಾಣಿಗಳು ಇರುವುದರಿಂದಲೇ ಅಲ್ಲಿಯ ನೀರು ಶುದ್ಧವಾಗಿರುತ್ತದೆ. ರಾಜು ಮಾಡಿದ ಕೆಲಸಕ್ಕೆ ನೀವೆಲ್ಲ ಹೆಮ್ಮೆ ಪಡಬೇಕು. ಪರೋಪಕಾರ, ಅನುಕಂಪ, ಸಹಾನುಭೂತಿ, ಪ್ರಾಣಿದಯೆ ಮುಂತಾದ ಗುಣಗಳು ಚಿಕ್ಕಂದಿನಿಂದಲೇ ಬೆಳೆಯುತ್ತಿರಬೇಕು. ಇಂದಿನ ಬಾಲಕರೇ ನಾಳೆಯ ನಾಯಕರು ಎಂಬಂತೆ,, ಇಂದು ಚಿಕ್ಕವರಿರುವ ಈ ಮಕ್ಕಳಲ್ಲಿ ಒಳ್ಳೆಯ ಗುಣಗಳು ಬೆಳೆಯುವಂತೆ ಪ್ರೋತ್ಸಾಹನೆ ನೀಡಿದರೆ ಮುಂದೆ ಸಮಾಜದಲ್ಲಿ ಒಳ್ಳೆಯ ಪರಿಣಾಮವಾಗುತ್ತದೆ ಎಂದು ಪ್ರಶಂಸೆ ಮಾಡಿದರು. ಎಲ್ಲರೂ ಚಪ್ಪಾಳೆ ತಟ್ಟಿ ರಾಜುನನ್ನು ಅಭಿನಂದಿಸಿದರು.

– ಕೃಷ್ಣ ಎಂ. ವ್ಹಿ.

**ಶಬ್ದಗಳ ಅರ್ಥ :-**

ತಂಡ - ಗುಂಪು; ಬ್ಲೀಚಿಂಗ ಪೌಡರ - ನೀರನ್ನು ಶುದ್ಧಿಗೊಳಿಸುವ ಔಷಧಿ;

***ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.**

**ಸ್ಪರ್ಶ ________ ; ಜಲಚರ ________**

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ರಾಜು ಶಾಲೆಯಿಂದ ಬರುವಾಗ ಏನು ತಂದನು ?

ಆ) ಸುತ್ತಲಿನ ಗ್ರಾಮಗಳಲ್ಲಿ ಯಾವ ರೋಗ ಹಬ್ಬಿತು ?

ಇ) ಜಲಚರ ಪ್ರಾಣಿಗಳು ಏನು ಮಾಡುತ್ತವೆ ?

**ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಅವುಗಳಿಗೆ ಉತ್ತರ ಬರೆಯಿರಿ.**

**ಅ)** ________

**ಉತ್ತರ** ________

**ಆ)** ________

**ಉತ್ತರ** ________

**ಪ್ರಶ್ನೆ ೩) ಕೆಳಗಿನ ಮಾತುಗಳನ್ನು ಯಾರು, ಯಾರಿಗೆ ಹೇಳಿದರು.**

ಅ) ಇದು ಬಹಳ ಮುದ್ದಾಗಿದೆಯಲ್ಲ !

ಆ) ಈ ಪ್ರಾಣಿಯನ್ನು ಹಿಡಿದು ತಂದು ಸಾಕುವುದು ಅಪರಾಧ.

ಇ) ನಾವು ಮನೆಯನ್ನು ಪರಿಸರವನ್ನು ಸ್ವಚ್ಛವಾಗಿಡಬೇಕು.

ಈ) ಬಾವಿಯಲ್ಲಿ ಔಷಧ ಹಾಕಿದರೆ ಆಮೆಗೆ ಏನಾದರೂ ತೊಂದರೆ ಆಗುತ್ತದೆಯೇ ?

ಉ) ಏನು, ನಿಮ್ಮೂರ ಬಾವಿಯಲ್ಲಿ ಆಮೆ ಇದೆಯೆ !

**ಪ್ರಶ್ನೆ ೪) ಹೊಂದಿಸಿ ಬರೆಯಿರಿ.**

| 'ಅ' ಗುಂಪು | | 'ಬ' ಗುಂಪು |
|---|---|---|
| ಅ) ಆಮೆ | [ ] | ೧) ಸೊಳ್ಳೆ |
| ಆ) ಪ್ರಾಣಿದಯೆ | [ ] | ೨) ರೋಗ |
| ಇ) ಕಾಮಾಲೆ | [ ] | ೩) ಪ್ರಾಣಿ |
| ಈ) ನಿಂತ ನೀರು | [ ] | ೪) ರಾಜು |

**ಪ್ರಶ್ನೆ ೫) ಕೆಳಗಿನ ವಾಕ್ಯಗಳಲ್ಲಿಯ ನಾಮಪದಗಳನ್ನು ಗುರುತಿಸಿ ಅವುಗಳ ಕೆಳಗೆ ಗೆರೆ ಹೊಡೆಯಿರಿ.**

೧) ಶಾಮನು ಊರಿಗೆ ಹೋದನು.

೨) ಕಮಲೆ ಒಳ್ಳೆಯ ಆಟಿಕೆಯನ್ನು ತಂದಳು.

೩) ನರ್ಮದಾ ನದಿಯು ಹರಿಯುತ್ತಿದೆ.

**ಉಪಕ್ರಮ :** ಸ್ಥಳಿಯ ವೈದ್ಯರನ್ನು ಭೇಟಿಯಾಗಿ ಸಾಂಕ್ರಮಿಕ ರೋಗವನ್ನು ತಡೆಗಟ್ಟುವ ಕುರಿತು ಮಾಹಿತಿ ತಿಳಿದುಕೊಳ್ಳಿರಿ.

# ಪರೋಪಕಾರವೇ ಪುಣ್ಯ

**ವ್ಯಾಕರಣ :**

**ಸರ್ವನಾಮ**

ಉದಾ : ೧) ಶಾರದೆಯು ಬಹಳ ಜಾಣಳು. ಅವಳು ದಿನಾಲೂ ಶಾಲೆಗೆ ಹೋಗುವಳು. ಅವಳು ಪಾಠ ಓದುವಳು.

೨) ಮಂಗಗಳು ತೋಟಕ್ಕೆ ಬಂದವು. ಅವು ಮರಗಳನ್ನು ಏರಿದವು.

೩) ನಾನು ಶಾಲೆಗೆ ಹೋಗುವೆನು. ನನ್ನ ವರ್ಗಮಿತ್ರರೊಂದಿಗೆ ಆಡುವೆನು.

೪) ಅವನು ಕೇಳಿದನು, 'ನೀನು ಯಾರು?'

ಮೇಲಿನ ವಾಕ್ಯಗಳಲ್ಲಿ ಗೆರೆ ಹೊಡೆದ ಶಬ್ದಗಳಾದ ಅವಳು, ಅವು, ನಾನು, ನನ್ನ, ಅವನು, ನೀನು, ಇವುಗಳನ್ನು ನಾಮಪದಗಳ ಬದಲಾಗಿ ಬಳಸಲಾಗಿದೆ. ನಾಮಪದಗಳ ಬದಲಾಗಿ ಬಳಸುವ ಶಬ್ದಗಳಿಗೆ ಸರ್ವನಾಮ'ಗಳು ಅನ್ನುವರು.



## ೪ ನಮ್ಮ ಊರು



ನೋಡ ಬನ್ನಿ ಗೆಳೆಯರೆ
ನಮ್ಮ ಊರಿನಂದವ
ಪದಗಳಿಲ್ಲ ಬಣ್ಣಿಸಲು
ಹಸಿರು ಸಿರಿಯ ಚಂದವ

ಸುತ್ತ ಮುತ್ತ ಬೆಟ್ಟ - ಗುಡ್ಡ
ತಪ್ಪಲಲ್ಲಿ ನದಿಯಿದೆ
ಭೀಕರ ಬರಗಾಲದಲ್ಲೂ
ಬತ್ತದಷ್ಟು ಜಲವಿದೆ

ತೆಂಗು - ಕಂಗು, ಬಾಳೆ, ಭತ್ತ
ಮಡಿಲು ತುಂಬಿ ನಿಂತಿವೆ
ಕಣ್ಣು ಕೋರೈಸುವಂತೆ
ಇಳೆಗೆ ಕಳೆಯ ಕಟ್ಟಿವೆ

ರಂಗು ರಂಗಿನ ಹೂಗಳು
ಮನಕೆ ಮುದವ ನೀಡಿವೆ
ಗುಂಯ್ ಗುಡುವ
ಜೇನ್ನೊಣಗಳು
ಇಲ್ಲಿ ಮನೆಯ ಮಾಡಿವೆ

ಅಸಾಧ್ಯವು ಬಣ್ಣಿಸಲು
ಊರ ಜನರ ಪರಿಶ್ರಮ
ಕಂಗಳನ್ನು ತಣಿಸುವಂಥ
ಊರ ಚೆಲುವು ಅನುಪಮ!

- ಗೀತಾ ಬರ್ಲ

**ಶಬ್ದಗಳ ಅರ್ಥ**

ಪದ – ಶಬ್ದ; ಕಂಗು – ಅಡಿಕೆಮರ; ಇಳೆ – ಭೂಮಿ; ಕಳೆ – ಸೌಂದರ್ಯ; ಮುದ – ಆನಂದ

***ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.**

ಬತ್ತು ________ ; ಕಂಗಳು ________ ; ಅನುಪಮ ________

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಏನನ್ನು ಬಣ್ಣಿಸಲು ಪದಗಳೇ ಇಲ್ಲ ?

________________________________

ಆ) ಎಷ್ಟು ಜಲವಿದೆ ?

________________________________

ಇ) ಇಳೆಗೆ ಕಳೆ ಹೇಗೆ ಬಂದಿದೆ ?

________________________________

**ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

**ಅ)** ________________

**ಉತ್ತರ** ________________

**ಆ)** ________________

**ಉತ್ತರ** ________________

**ಪ್ರಶ್ನೆ ೩) ಕವಿತೆಯ ಬಿಟ್ಟ ಸಾಲುಗಳನ್ನು ಪೂರ್ಣಗೊಳಿಸಿರಿ.**

ರಂಗು ರಂಗಿನ ..........


...............................

...............................

..... ಮನೆಯ ಮಾಡಿವೆ.

**ಉಪಕ್ರಮ :** ಪರಿಸರದಲ್ಲಿ ಹೂಗಿಡಗಳನ್ನು ಹಚ್ಚಿ ಪರಿಸರವನ್ನು ಸುಶೋಭಿತಗೊಳಿಸಿರಿ.

## ಚೆಂದ ನಮ್ಮ ಹಳ್ಳಿ, ಹಬ್ಬಿದಂತೆ ಬಳ್ಳಿ



# ೫ ಮರುಳಸಂದ್ರದ ಸೇತುವೆ



ಬಹಳ ಹಿಂದೆ ಮರುಳಸಂದ್ರ ಎಂಬ ಊರು ಇತ್ತು. ಆ ಊರಿನಲ್ಲಿ ಕೆಲವು ಜನ ಮುಟ್ಠಾಳರು ಇದ್ದರು. ಅವರ ಮುಟ್ಠಾಳತನವನ್ನು ನೆನೆಸಿಕೊಂಡು ನಗುವವರು ಇಂದೂ ಬಹಳ ಜನ ಇದ್ದಾರೆ. ಅಂಥವರು ಹೇಳಿಕೊಂಡು ನಗುವ ಅನೇಕ ಕತೆಗಳಲ್ಲಿ ಇದೂ ಒಂದು.

ಒಂದು ಸಲ ಮರುಳಸಂದ್ರದ ಇಬ್ಬರು ಮೂರ್ಖರು ರಸ್ತೆಯಲ್ಲಿ ಭೇಟಿಯಾದರು. ಒಬ್ಬನ ಹೆಸರು ಮಂಕ, ಮತ್ತೊಬ್ಬನ ಹೆಸರು ಮೂಳ. ಅವರಿಬ್ಬರಿಗೂ ಮಾತುಕತೆ ಮೊದಲಾಯಿತು.

ಮಂಕ : ಏನೋ ಮೂಳ! ಎಲ್ಲಿಗೆ ಹೊರಟೆ?

ಮೂಳ : ಸಂತೆಗೆ.

ಮಂಕ : ಏಕೆ ?

ಮೂಳ : ಕುರಿ ಕೊಳ್ಳಲಿಕ್ಕೆ.

ಮಂಕ : ಹೊಳೆ ಇದೆಯಲ್ಲಪ್ಪಾ, ಅಷ್ಟೊಂದು ಕುರಿ ಹೇಗೆ ತರುತ್ತೀ ?

ಮೂಳ : ಹೊಳೆ ಇದ್ದರೇನು ? ಸೇತುವೆಯಿಲ್ಲವೇ ?

ಮಂಕ : ಸೇತುವೆಯ ಮೇಲೆ ಕುರಿ ತರಬಾರದು.

ಮೂಳ : ಸೇತುವೆಯ ಮೇಲೆಯೇ ಕುರಿ ತರುತ್ತೇನೆ.

ಮಂಕ : ತರಬಾರದು ಎಂದು ನಾನು ಹೇಳಿದ್ದು ಕೇಳಿಸಿತೋ ಇಲ್ಲವೋ ?

ಮೂಳ : ತರುತ್ತೇನೆ ಎಂದು ನಾನು ಹೇಳಿದ್ದು ಕೇಳಿಸಿತೋ ಇಲ್ಲವೋ ?

ಮಂಕ : ಅದು ಹೇಗೆ ತರುತ್ತೀ, ನೋಡಿಯೇ ಬಿಡುತ್ತೇನೆ.

ಮೂಳ : ತಂದು ತೋರಿಸಿಯೇ ಬಿಡುತ್ತೇನೆ.

ಮೂಳ ಪಕ್ಕದಲ್ಲೇ ಬಿದ್ದಿದ್ದ ಒಂದು ಕೋಲನ್ನು ತೆಗೆದುಕೊಂಡನು. ಆ ಕೋಲನ್ನು ನೆಲಕ್ಕೆ ಜೋರಾಗಿ ಬಡಿಯುತ್ತಾ ''ಹೇ! ಹೇ!'' ಎಂದು ಕೂಗಿದನು.


ಮಂಕನು ಅಲ್ಲೆ ಬಿದ್ದಿದ್ದ ಮತ್ತೊಂದು ಕೋಲನ್ನು ತೆಗೆದುಕೊಂಡನು. ಅವನೂ ನೆಲಕ್ಕೆ ಜೋರಾಗಿ ಬಡಿಯುತ್ತಾ ''ಹಚಾ! ಹಚಾ!'' ಎಂದು ಕೂಗಿದನು. ನೆಲಕ್ಕೆ ಕೋಲು ಬಡಿಯುವುದು, ಕೂಗಿಕೊಳ್ಳುವುದು ನಡೆದೇ ಇತ್ತು.

ಸ್ವಲ್ಪ ಹೊತ್ತಾದ ಮೇಲೆ ಮೂಳ ''ಏ ಮಂಕ! ನನ್ನ ಕುರಿ ಹೊಳೆಗೆ ಬಿದ್ದಾವು ಜೋಕೆ! ಎಂದನು. ಮಂಕ, ''ಹೊಳೆಯಲ್ಲಾದರೂ ಬೀಳಲಿ! ಬಾವಿಯಲ್ಲಾದರೂ ಬೀಳಲಿ! ಸೇತುವೆಯ ಮೇಲೆ ಹೋಗದಿದ್ದರೆ ಆಯಿತು'' ಎಂದನು. ಸರಿ ಇಬ್ಬರಿಗೂ ಜಗಳ ಸುರುವಾಯಿತು.

ಅದೇ ಸಮಯಕ್ಕೆ ಸರಿಯಾಗಿ ಸಂತೆಯಿಂದ ಮತ್ತೊಬ್ಬ ಮೂರ್ಖ ಹಿಂದಿರುಗುತ್ತಿದ್ದ. ಅವನ ಹೆಸರು ಮಡೆಯ. ಅವನ ಬೆನ್ನ ಮೇಲೆ ಅಕ್ಕಿ ತುಂಬಿದ ಚೀಲವಿತ್ತು. ಮಂಕ, ಮೂಳರ ಜಗಳವನ್ನು ನೋಡಿ ನಿಂತನು. ''ಏಕಪ್ಪಾ, ಜಗಳವಾಡುತ್ತಿದ್ದೀರಿ?'' ಎಂದು ಕೇಳಿದನು, ಮೂಳ, ''ನನ್ನ ಕುರಿಗಳನ್ನು ಸೇತುವೆಯ ಮೇಲೆ ಬಿಡುತ್ತಿಲ್ಲ ಈ ಮಂಕ!'' ಎಂದನು. ''ಕುರಿಯನ್ನು ಸೇತುವೆಯ ಮೇಲೆ ಬಿಡಬಾರದು ಎಂದೆ. ಆದರೂ ಬಿಡುತ್ತಿದ್ದಾನೆ ಈ ಮೂಳ!'' ಎಂದನು ಮಂಕ.

ಇವರಿಬ್ಬರ ಜಗಳವನ್ನು ನೋಡಿ ಮಡೆಯನಿಗೆ ನಗು ಬಂತು. ''ಅಲ್ಲ! ಎಂಥ ಮುಟ್ಠಾಳರು! ಕುರಿಗಳೇ ಇಲ್ಲ, ಆದರೂ ಜಗಳ ಆಡುತ್ತಿದ್ದಾರೆ. ಇವರಿಗೆ ಸ್ವಲ್ಪವೂ ಬುದ್ಧಿಯಿಲ್ಲ ಎಂಬುದನ್ನು ತೋರಿಸಿ ಕೊಡಬೇಕು'' ಎಂದು ಮನಸ್ಸಿನಲ್ಲಿಯೇ ನಕ್ಕನು. ಸೇತುವೆಯ ಮೇಲೆ ಹೋಗಿ ನಿಂತನು. ತನ್ನ ಬೆನ್ನ ಮೇಲೆ ಇದ್ದ ಚೀಲವನ್ನು ಕೆಳಗೆ ಇಳಿಸಿದನು. ಅದರ ಬಾಯಿಯನ್ನು ಬಿಚ್ಚಿ, ಅದರಲ್ಲಿದ್ದ ಅಕ್ಕಿಯನ್ನೆಲ್ಲ ಹೊಳೆಗೆ ಚೆಲ್ಲಿದನು. ಒಂದೂ ಅಕ್ಕಿಯ ಕಾಳು ಉಳಿಯದಂತೆ, ಚೀಲವನ್ನು ಚೆನ್ನಾಗಿ ಜಾಡಿಸಿದನು. ಬಳಿಕ ಅವರಿಬ್ಬರ ಕಡೆ ತಿರುಗಿ ''ಲೋ ಮಂಕ, ಮೂಳ! ಈ ಚೀಲದಲ್ಲಿ ಅಕ್ಕಿ ಎಷ್ಟಿದೆ?'' ಎಂದು ಕೇಳಿದನು. ಅವರಿಬ್ಬರೂ ''ಒಂದು ಕಾಳೂ ಇಲ್ಲ ಖಾಲಿ!'' ಎಂದರು. ಕೂಡಲೇ ಮಡೆಯನು ''ನಿಮ್ಮ ತಲೆಯೂ ಹಾಗೆಯೇ ಖಾಲಿ!'' ಎಂದನು. ಅಷ್ಟರಲ್ಲಿ ಅದೇ ರಸ್ತೆಯ ಮೇಲೆ ಮತ್ತೊಬ್ಬ ಪ್ರವಾಸಿ ಬಂದನು. ಅವನು ಈ ಮೂವರ ಮೂರ್ಖತನವನ್ನು ಕೇಳಿ. ಬೆಪ್ಪಾದನು ಮೂವರಿಗೂ ತಿಳಿ ಹೇಳಿ ಅವರನ್ನು ಕರೆದುಕೊಂಡು ಹೋದನು.

– ಜನಪದ



**ಶಬ್ದಗಳ ಅರ್ಥ**

ಮುಟ್ಠಾಳ - ಮೂರ್ಖ, ಪಕ್ಕದಲ್ಲಿ - ಬದಿಯಲ್ಲಿ

***ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.**

ಜಾಡಿಸು ________ ; ಹೊಳೆ ________ ; ಖಾಲಿ ________

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ರಸ್ತೆಯಲ್ಲಿ ಯಾರು ಬೆಟ್ಟಿಯಾದರು ?

________

ಆ) ಮೂಳನು ಎಲ್ಲಿಗೆ ಹೊರಟಿದ್ದನು ?

________

ಇ) ಇಬ್ಬರ ನಡುವೆ ಜಗಳ ಏಕೆ ಪ್ರಾರಂಭವಾಯಿತು ?

________

**ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

**ಅ)** ________

**ಉತ್ತರ** ________

**ಆ)** ________

**ಉತ್ತರ** ________

**ಪ್ರಶ್ನೆ ೩) ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು.**

ಅ) ಹೊಳೆ ಇದೆಯಲ್ಲಪ್ಪಾ.

________

ಆ) ಅದು ಹೇಗೆ ತರುತ್ತೀ ನೋಡುತ್ತೇನೆ.

________

ಇ) ನಿಮ್ಮ ತಲೆಯೂ ಹಾಗೆಯೇ ಖಾಲಿ.

________

ಈ) ಒಂದು ಕಾಳೂ ಇಲ್ಲ.

________

**ಪ್ರಶ್ನೆ ೪) ಕೆಳಗಿನ ವಾಕ್ಯಗಳಲ್ಲಿಯ ಸರ್ವನಾಮಗಳನ್ನು ಗುರುತಿಸಿ ಅವುಗಳ ಕೆಳಗೆ ಗೆರೆ ಹೊಡೆಯಿರಿ.**

ಅ) ನಾನು ಅಜ್ಜನ ಊರಿಗೆ ರಜೆಯಲ್ಲಿ ಹೋಗುತ್ತೇನೆ.

ಆ) ಅವನು ನನಗೆ ತಿನ್ನಲು ತಿನಿಸು ಕೊಡುವನು.

ಇ) ಎತ್ತುಗಳು ತೋಟದಲ್ಲಿವೆ ಅವು ಹುಲ್ಲು ತಿನ್ನುತ್ತವೆ.

ಈ) ಶಾರದೆ ಶಾಲೆಗೆ ಇಂದು ಹೋಗುವದಿಲ್ಲ ಏಕೆಂದರೆ ಅವಳ ಮೈಯಲ್ಲಿ ಹುಷಾರಿಲ್ಲ.

**ಉಪಕ್ರಮ :** ಮಾತಿನಿಂ ನಗೆನುಡಿಯು । ಮಾತಿನಿಂ ಹಗೆಕೊಲೆಯು
ಮಾತಿನಿಂ ಸರ್ವ ಸಂಪದವು । ಲೋಕಕ್ಕೆ
ಮಾತೆ ಮಾಣಿಕ್ಯವು ಸರ್ವಜ್ಞ।
ಈ ತ್ರಿಪದಿಯ ಅರ್ಥವನ್ನು ಶಿಕ್ಷಕರಿಂದ / ಪಾಲಕರಿಂದ ಕೇಳಿ ತಿಳಿದುಕೊಳ್ಳಿರಿ.

# ಮಾತುಬಲ್ಲವ ಮಾಣಿಕ್ಯತಂದ, ಮಾತರಿಯದವ ಜಗಳತಂದ

**ವ್ಯಾಕರಣ :**

**ಲಿಂಗ**

'ಲಿಂಗ' ಎಂದರೆ ಜಾತಿ ಅಥವಾ ಗುರುತು ಎಂದರ್ಥ. ಸಾಮಾನ್ಯವಾಗಿ ಈ ಗುರುತುಗಳ ಅನುಸಾರವಾಗಿ ಲಿಂಗವನ್ನು ನಿರ್ಧರಿಸುತ್ತೇವೆ. ಕನ್ನಡದಲ್ಲಿ ಮೂರು ಲಿಂಗಗಳಿವೆ. ಪುಲ್ಲಿಂಗ, ಸ್ತ್ರೀಲಿಂಗ, ನಪುಸಕಲಿಂಗ.

೧) ಪುಲ್ಲಿಂಗ : ಪುರುಷ ಅಥವಾ ಗಂಡಸು ಎಂಬರ್ಥಗಳನ್ನು ಸೂಚಿಸುವ ಶಬ್ದಗಳು ಪುಲ್ಲಿಂಗ ಎನಿಸುತ್ತವೆ.
ಉದಾ : ರಾಮ, ಕವಿ, ರಾಜ, ಶಿವ, ಹುಡುಗ ತಂದೆ ಇತ್ಯಾದಿ.

೨) ಸ್ತ್ರೀಲಿಂಗ : ಸ್ತ್ರೀ ಅಥವಾ ಹೆಂಗಸು ಎಂಬ ಅರ್ಥವನ್ನು ಸೂಚಿಸುವ ಶಬ್ದಗಳು 'ಸ್ತ್ರೀಲಿಂಗ' ಎನಿಸುತ್ತವೆ.
ಉದಾ : ಸೀತೆ, ತಾಯಿ, ರಾಣಿ, ಪಾರ್ವತಿ, ಹುಡುಗಿ, ಕವಯಿತ್ರಿ, ಇತ್ಯಾದಿ.

೩) ನಪುಸಕಲಿಂಗ: ನಿರ್ದಿಷ್ಟವಾಗಿ ಗಂಡು, ಹೆಣ್ಣು ಎಂದು ಸೂಚಿಸದಿರುವ ಶಬ್ದಗಳು 'ನಪುಸಕಲಿಂಗ' ಗಳೆನಿಸುತ್ತವೆ.
ಉದಾ : ಕಲ್ಲು, ಪುಸ್ತಕ, ಬಂಡಿ, ಗದ್ದೆ, ಹೂವು, ಬಳ್ಳಿ ಇತ್ಯಾದಿ.



# ೬ ಸತ್ಸಂಗ



ಇಸ್ಮಾಯಿಲ್ ಬಹುದೊಡ್ಡ ವಿದ್ವಾಂಸ. ಸದಾಚಾರಿ ಹಕೀಮ. ಆತ ಮರಣ ಶಯ್ಯೆಯಲ್ಲಿದ್ದ. ಅವನ ಜೀವನದ ಅಂತಿಮ ಕ್ಷಣ ಸಮೀಪಿಸುತ್ತಿತ್ತು. ಆಗ ಇಸ್ಮಾಯಿಲ್‌ನು ತನ್ನ ಹತ್ತಿರವೇ ಶೋಕತಪ್ತನಾಗಿ ಕುಳಿತಿದ್ದ ತನ್ನ ಮಗ ಹುಸೇನನನ್ನು ಒಮ್ಮೆ ನೋಡಿದ. ಅವನನ್ನು ಪ್ರೀತಿಯಿಂದ ಮೈದಡವಿದ. ''ಮಗೂ! ಇಷ್ಟು ದಿನ ಸಮಯ ಸಿಕ್ಕಾಗಲೆಲ್ಲಾ ನಿನಗೆ ಅನೇಕ ನೀತಿ ವಿಷಯಗಳನ್ನು ಹೇಳುತ್ತಾ ಬಂದಿದ್ದೇನೆ. ನೀನು ಅದನ್ನು ತುಂಬ ಸಾವಧಾನಚಿತ್ತನಾಗಿ ಕೇಳಿ ಅದರಂತೆ ಜೀವನ ರೂಪಿಸಿಕೊಳ್ಳಲು ಪ್ರಯತ್ನ ನಡೆಸಿದ್ದೀಯೆ. ಈಗ ನನ್ನ ಕೊನೆಯ ಕ್ಷಣ ಬಂದಿದೆ. ನಿನಗೆ ಕೊನೆಯದಾಗಿ ಒಂದು ನೀತಿ ವಿಷಯ ಹೇಳುತ್ತೇನೆ. ಅದನ್ನು ಚೆನ್ನಾಗಿ ಗ್ರಹಿಸು'' ಎಂದನು.

ಹುಸೇನನು ಸುಮ್ಮನೆ ತಲೆಯಾಡಿಸಿದನು. ಅವನಿಗೆ ದುಃಖ ಒತ್ತರಿಸಿ ಬರುತ್ತಿತ್ತು. ''ಮಗೂ! ದೇವರ ಕೋಣೆಯಲ್ಲಿರುವ ಧೂಪ ಪಾತ್ರೆಯನ್ನು ತೆಗೆದುಕೊಂಡು ಬಾ ಎಂದು ಇಸ್ಮಾಯಿಲ್ ಹೇಳಿದನು. ಆಗ ಹುಸೇನನು ಧೂಪಪಾತ್ರೆಯನ್ನು ತಂದು ತಂದೆಯ ಮುಂದೆ ಹಿಡಿದನು. ಇಸ್ಮಾಯಿಲ್ ಭರಣಿ ತೆಗೆದು ಸ್ವಲ್ಪ ಶ್ರೀಗಂಧದ ಪುಡಿಯನ್ನು ಮಗನ ಅಂಗೈಯಲ್ಲಿಟ್ಟು ಆನಂತರ ಅಲ್ಲಿಯೇ ಇದ್ದ ಅಗ್ಗಿಷ್ಟಿಕೆಯಿಂದ ಒಂದು ಚೂರು ಇದ್ದಿಲು ತೆಗೆದು ಮಗನ ಇನ್ನೊಂದು ಕೈಯಲ್ಲಿಟ್ಟನು. ಹುಸೇನನು ಕುತೂಹಲದಿಂದ ತಂದೆಯ ಈ ಕೆಲಸವನ್ನು ನೋಡುತ್ತಿದ್ದ. ಅವನಿಗೆ ಏನೊಂದೂ ಅರ್ಥ ಆಗಲಿಲ್ಲ.

''ಮಗೂ! ಈಗ ಶ್ರೀಗಂಧದ ಪುಡಿ ಮತ್ತು ಇದ್ದಿಲುಗಳನ್ನು ಅವುಗಳು ಇದ್ದ ಜಾಗದಲ್ಲಿಯೇ ಇಟ್ಟುಬಿಡು'' ಎಂದನು ಇಸ್ಮಾಯಿಲ್. ಹುಸೇನನು ಹಾಗೆಯೇ ಮಾಡಿದನು. ಶ್ರೀಗಂಧದ ಪುಡಿಯನ್ನು ಹಿಡಿದಿದ್ದ ಕೈಯಲ್ಲಿ ಅದರ ಸುವಾಸನೆ ಬರುತ್ತಿತ್ತು. ಇದ್ದಿಲು ಹಿಡಿದಿದ್ದ ಕೈಯಲ್ಲಿ ಸುವಾಸನೆ ಇರಲಿಲ್ಲ. ಇದ್ದಲಿನ ಮಸಿ ಮಾತ್ರ ಹಾಗೆಯೇ ಅಂಗೈಯಲ್ಲಿ ಉಳಿದಿತ್ತು.

ಇಸ್ಮಾಯಿಲ್ ಮಗನ ಕೈ ನೋಡುತ್ತಾ ಹೇಳಿದ, ''ಮಗೂ! ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ. ಸತ್ಸಂಗ ಚಂದನದಂತೆ. ಸಜ್ಜನರು, ಸಾಧು-ಸಂತರು, ಮಹಾತ್ಮರು ನಮ್ಮ ಜೊತೆಯಲ್ಲಿ ಇರುವವರೆಗೂ ಅವರಿಂದ ನಮಗೆ

ಒಳಿತಾಗುತ್ತದೆ. ಅವರು ನಮ್ಮಿಂದ ದೂರ ಹೋದರೂ ಅವರ ಸಹವಾಸದ ಸುಖ ಸದಾ ನಮ್ಮೊಂದಿಗಿರುತ್ತದೆ. ಸುಖದ ಕ್ಷಣಗಳು ಸದಾ ಸಿಹಿಯಾಗಿರುತ್ತವೆ. ಆನಂದದಾಯಕವಾಗಿರುತ್ತವೆ. ದುರ್ಜನರು ಇದ್ದಲಿ ಇದ್ದಂತೆ. ಅವರು ನಮ್ಮ ಜೊತೆ ಇದ್ದಾಗಲೂ ಅಥವಾ ದೂರ ಹೋದಾಗಲೂ ಅವರ ಸಹವಾಸದ ದುಃಖ ನಮ್ಮನ್ನು ಕಾಡುತ್ತದೆ. ಜೀವನದಲ್ಲಿ ಅಶಾಂತಿ ತುಂಬಿ ನೆಮ್ಮದಿ ಹಾಳಾಗುತ್ತದೆ. ನಾವು ಶ್ರೀಗಂಧದ ಸಹವಾಸ ಮಾಡಬೇಕೇ ಹೊರತು ಇದ್ದಿಲಿನ ಸಹವಾಸ ಮಾಡಬಾರದು. ಸಜ್ಜನರಿಂದ ನಮ್ಮ ಗೌರವ ಇಮ್ಮಡಿಸುತ್ತದೆ. ದುರ್ಜನರಿಂದ ನಮ್ಮ ಗೌರವ ಕ್ಷೀಣಿಸುತ್ತದೆ. ಆದ್ದರಿಂದ ನೀನು ಸದಾ ಸಜ್ಜನರ ಸಹವಾಸ ಮಾಡು. ದುಷ್ಟರಿಂದ ದೂರವಿರು'' ಇಸ್ಮಾಯಿಲ್ ನೀತಿ ಸಂಹಿತೆಯನ್ನು ಮಗನಿಗೆ ಪರಿಚಯಿಸಿದ.

ತಂದೆಯ ಸಾಂಕೇತಿಕ ಉಪದೇಶಗಳು ಹುಸೇನನಿಗೆ ಸಂತೋಷವನ್ನುಂಟು ಮಾಡಿದವು. ತಂದೆಯ ಬಗ್ಗೆ ಅವನ ಹೃದಯದಲ್ಲಿ ಅಪಾರ ಕೃತಜ್ಞತೆಯಿತ್ತು. ಅವನು ತನ್ನ ಜೀವನದುದ್ದಕ್ಕೂ ತಂದೆಯ ಮಾತುಗಳನ್ನು ನೆನಪಿಟ್ಟುಕೊಂಡು ಅದರಂತೆಯೇ ನಡೆದನು.

– ಎಂ. ವಿ. ನಾಗರಾಜರಾವ್

### ಶಬ್ದಗಳ ಅರ್ಥ

ಹಕೀಮ – ವೈದ್ಯ; ಅಂತಿಮ – ಕೊನೆ; ಶೋಕತಪ್ತ – ದುಃಖ; ಸತ್ಸಂಗ – ಒಳ್ಳೆಯವರ ಸಂಗ.

***ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.**

**ವಿದ್ವಾಂಸ** __________ **; ಗ್ರಹಿಸು** __________

### ವಿರುದ್ಧಾರ್ಥಕ ಪದಗಳು

ಜನನ X ಮರಣ; ಸುಖ X ದು:ಖ; ಸಜ್ಜನ X ದುರ್ಜನ;
ಒಳಿತು X ಕೆಡಕು; ಸಿಹಿ X ಕಹಿ; ಶಾಂತಿ X ಅಶಾಂತಿ;
ಕೃತಜ್ಞ X ಕೃತಘ್ನ

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಇಸ್ಮಾಯಿಲ್ ಯಾರು ?

__________

ಆ) ಶೋಕತಪ್ತನಾಗಿ ಕುಳಿತ ಮಗನಿಗೆ ಇಸ್ಮಾಯಿಲ್ ಏನು ಹೇಳಿದನು ?

__________

ಇ) ಇದ್ದಿಲು ಹಿಡಿದ ಕೈಯಲ್ಲಿ ಏನು ಕಂಡುಬಂದಿತು ?

__________

**ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

**ಅ)** __________

**ಉತ್ತರ** __________

**ಆ)** __________

**ಉತ್ತರ** __________

ಪ್ರಶ್ನೆ ೩) ಬಿಟ್ಟ ಸ್ಥಳ ತುಂಬಿರಿ.

ಅ) ಅವನ ಜೀವನದ ................. ಸಮೀಪಿಸುತ್ತಿತ್ತು.

ಆ) ................. ಒಂದು ಚೂರು ಇದ್ದಿಲು ತೆಗೆದು ಮಗನ ಇನ್ನೊಂದು ಕೈಯಲ್ಲಿಟ್ಟ.

ಇ) ಸಜ್ಜನರ ಸಹವಾಸ ................. ಸವಿದಂತೆ.

ಈ) ನಮ್ಮ ಗೌರವ ................. ಇಮ್ಮಡಿಸುತ್ತದೆ.

ಉ) ತಂದೆಯ ಬಗ್ಗೆ ಅವನ ಹೃದಯದಲ್ಲಿ ಅಪಾರ .................

ಪ್ರಶ್ನೆ ೪) ಗೆರೆ ಹೊಡೆದ ಕೆಳಗಿನ ಶಬ್ದಗಳಲಿಯ ಲಿಂಗಗಳನ್ನು ಗುರುತಿಸಿರಿ.

ಅ) ಕಾವೇರಿ ನದಿಯು ರಭಸವಾಗಿ ಹರಿಯುತ್ತದೆ. [ ]

ಆ) ರಾಜು ಮತ್ತು ಗೀತಾ ಆಟ ಆಡುವರು. [ ]

ಇ) ಮೇಜಿನ ಮೇಲೆ ಪುಸ್ತಕವಿದೆ. [ ]

**ಉಪಕ್ರಮ :** ಸಾಧು-ಸಂತರ ಭಾವಚಿತ್ರಗಳನ್ನು ಸಂಗ್ರಹಿಸಿ ಅವರ ಜೀವನದ ಬಗ್ಗೆ ಶಿಕ್ಷಕರಿಂದ/ಪಾಲಕರಿಂದ ಕೇಳಿ ತಿಳಿದುಕೊಳ್ಳಿರಿ.

# ಅಲ್ಪರಸಂಗ ಅಭಿಮಾನ ಭಂಗ


**ವ್ಯಾಕರಣ :**

**ವಚನ**


ಸಂಖ್ಯೆ - ವಸ್ತು ಅಥವಾ ವ್ಯಕ್ತಿಗಳ ಸಂಖ್ಯೆಯನ್ನು ತಿಳಿಸುವುದೇ ವಚನವೆನಿಸುವುದು. ವಚನಗಳಲ್ಲಿ ಎರಡು ಪ್ರಕಾರಗಳು - ಏಕವಚನ ಮತ್ತು ಬಹುವಚನ.

೧) **ಏಕವಚನ :** ವ್ಯಕ್ತಿ ಅಥವಾ ವಸ್ತುವಿನ ಸಂಖ್ಯೆಯು ಒಂದೇ ಆಗಿದ್ದರೆ **ಏಕವಚನವೆ**ನಿಸುವುದು.
ಉದಾ : ಹಣ್ಣು, ಹುಡುಗ, ಮರ, ಮಗ, ಕಾಯಿ, ಅಣ್ಣ, ಅಕ್ಕ, ಹುಡುಗಿ ಇತ್ಯಾದಿ.

೨) **ಬಹುವಚನ :** ವ್ಯಕ್ತಿ ಅಥವಾ ವಸ್ತುವಿನ ಸಂಖ್ಯೆಯು ಒಂದಕ್ಕಿಂತಲೂ ಹೆಚ್ಚಾಗಿದ್ದರೆ **ಬಹುವಚನವೆ**ನಿಸುವುದು.
ಉದಾ : ಹಣ್ಣುಗಳು, ಹುಡುಗರು, ಮರಗಳು, ಕಾಯಿಗಳು, ಇತ್ಯಾದಿ.



# ೭ ಬೆಳಗಿನ ಹಾಡು!



ಕೂಗಿತು ಕೇಳಿ ಬೆಳಗಿನ ಕೋಳಿ
ಕೂ ಕೂ ಕೂ ಕೂ
ತೀಡಿತು ಏಳಿ ತಣ್ಣನೆ ಗಾಳಿ
ಭುಂ ಭುಂ ಭುಂ ಭುಂ ॥೧॥

ಹಕ್ಕಿಗಳೆಲ್ಲ ಗೂಡನು ಬಿಟ್ಟು
ಹಾರುತಲಿವೆ ಹೊರಗೆ
ಗಿಡ ಮರ ಶಿರವ ಬಾಗಿಸಿ ವರವ
ಬೇಡುತಲಿವೆ ಧರೆಗೆ! ॥೨॥

ಮುಗಿಲಿನ ಮನೆಗೆ ತೋರಣಕಟ್ಟಿ
ನಗುತಿವೆ ರವಿಕಿರಣ
ತಿಳಿಜಲ ಕೊಳಕೆ ಕಮಲಗಳೆಲ್ಲ
ತೊಡಿಸಿವೆ ಆಭರಣ ! ॥೩॥

ಸಾಲಿಗೆ ಸಾಲೆ ಮುತ್ತಿನ ಮಾಲೆ
ಇಬ್ಬನಿ ಹನಿಗಳಲಿ
ಹೊಸ ಹೊಸ ಬಣ್ಣ ತೆರೆದಿದೆ ಕಣ್ಣ
ಹನಿ ಹನಿ ನೀರಿನಲಿ ! ॥೪॥

ಹೂವಿನ ಗಂಧ ತೀಡುತ ಬಂದ
ಗಾಳಿಯೆ ಹಾಡುತಿದೆ;
ಅಳಿಗಳ ಹಿಂಡು ಬರುವುದ ಕಂಡು
ಮುಂದಕೆ ಓಡುತಿದೆ ! ॥೫॥

ದಾಟಲು ನಸುಕು ಮಂಜಿನ ಮುಸುಕು
ಸರಿಯುತಲಿದೆ ನೋಡು !
ಹೊಳೆಯುವ ಬಾನು ಹೇಳುವದೇನು ?
ಬೆಳಗಿನದೀ ಹಾಡು ! ॥೬॥

– ಬಿ.ಎ. ಸನದಿ

**ಶಬ್ದಗಳ ಅರ್ಥ:-**

ಶಿರ - ತಲೆ; ಧರೆ - ಭೂಮಿ; ಬಾನು - ಆಕಾಶ; ಆಭರಣ - ಒಡವೆ;

***ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.**

**ಅಳಿ** __________ **; ಗಂಧ** __________ **; ಇಬ್ಬನಿ** __________

## ಅಭ್ಯಾಸ

**ಪ್ರಶ್ನೆ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಬೆಳಗಿನಲ್ಲಿ ಏನು ಕೂಗಿತು ?

______________________________

ಆ) ಹಕ್ಕಿಗಳು ಏನನ್ನು ಬಿಟ್ಟು ಹಾರುತ್ತಿದ್ದವು ?

______________________________

ಇ) ಗಿಡಮರಗಳು ಶಿರಬಾಗಿಸಿ ಏನನ್ನು ಬೇಡುತ್ತಿದ್ದವು ?

______________________________

**ಪ್ರಶ್ನೆ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

**ಅ)** ____________________

**ಉತ್ತರ** ____________________

**ಆ)** ____________________


**ಉತ್ತರ** ____________________

**ಪ್ರಶ್ನೆ೨) ಕೆಳಗಿನ ಕವಿತೆಯ ಸಾಲುಗಳನ್ನು ಪೂರ್ಣಮಾಡಿರಿ.**

ಹೂವಿನಗಂಧ ............
..............................
..............................
.............. ಓಡುತಿದೆ !

**ಉಪಕ್ರಮ :** ಈ ಕವಿತೆಯ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

# ಬೇಗ ಮಲಗಿ ಬೇಗ ಏಳು



# ೮ ಅಜ್ಜಿಯ ಸಲಹೆ

ಚೀನಾ ದೇಶದ ಒಂದು ಊರಿನಲ್ಲಿ ಫೌಚೌ ಎಂಬ ಮಹಿಳೆಯಿದ್ದಳು. ಅವಳಿಗೆ ಇಬ್ಬರು ಗಂಡುಮಕ್ಕಳಿದ್ದರು. ನೆರೆಯೂರಿನ ಇಬ್ಬರು ಹುಡುಗಿಯರೊಡನೆ ಫೌಚೌ ತನ್ನ ಮಕ್ಕಳ ಮದುವೆ ಮಾಡಿದಳು.

ಇಬ್ಬರೂ ಸೊಸೆಯರು ಅತ್ತಿಗೆ ಮೆಚ್ಚುಗೆಯಾಗುವಂತೆ ನಡೆದುಕೊಳ್ಳುತ್ತಿದ್ದರು. ಅತ್ತೆಯ ಊಟ-ಉಪಚಾರಗಳ ಕಡೆಗೆ ಹೆಚ್ಚಿನ ಗಮನ ಕೊಡುತ್ತಿದ್ದರು. ಅತ್ತೆಗೆ ದಿನವಿಡೀ ವಿಶ್ರಾಂತಿ ದೊರೆಯತೊಡಗಿತು.



ಒಮ್ಮೆ ಸೊಸೆಯಂದಿರಿಬ್ಬರು ತವರೂರಿಗೆ ಹೋಗಿ ಬರಬೇಕೆಂಬ ಆಸೆಯಾಯಿತು. ಅವರು ತಮ್ಮ ಆಸೆಯನ್ನು ಅತ್ತೆಗೆ ತಿಳಿಸಿದರು. ಫೌಚೌ ಉತ್ತರಿಸಲೇ ಇಲ್ಲ. ಸೊಸೆಯರು ಮತ್ತೆ ಮತ್ತೆ ತಮ್ಮ ಆಸೆಯನ್ನು ಅತ್ತೆಯ ಬಳಿ ಹೇಳಿಕೊಳ್ಳುತ್ತಲೇ ಇದ್ದರು. ಮುಂದೆಂದೂ ಸೊಸೆಯರು ತವರೂರಿನ ಹೆಸರೇ ಎತ್ತದಂತೆ ಮಾಡಬೇಕೆಂದು ಫೌಚೌ ನಿಶ್ಚಯಿಸಿದಳು. ಆಕೆಗೆ ಒಂದು ಹಂಚಿಕೆ ಹೊಳೆಯಿತು.

''ಮುದ್ದು ಸೊಸೆಯರೇ, ನಿಮಗೆ ತವರೂರಿಗೆ ಹೋಗಬೇಕೆಂಬ ಆಸೆ ಇದೆಯಲ್ಲವೆ? ಹೋಗಿ ಬನ್ನಿರಿ. ಆದರೆ ನನ್ನದೊಂದು ಕರಾರು. ಅದನ್ನು ನಡೆಸಿಕೊಟ್ಟರೆ ನಾನು ನಿಮಗೆ ಇಂದೇ ತವರೂರಿಗೆ ಹೋಗಲು ಅಪ್ಪಣೆ ಕೊಡುವೆನು'' ಎಂದು ಫೌಚೌ ಹೇಳಿದಳು.

ಸೊಸೆಯರಿಗೆ ತವರೂರಿಗೆ ಹೋಗುವ ಆಸೆ ಬಹಳವಾಗಿತ್ತು. ಅದಕ್ಕಾಗಿ ಅವರು ಯಾವ ಕೆಲಸ ಮಾಡಲೂ ಸಿದ್ಧರಿದ್ದರು. ''ಅತ್ತೆಯವರೆ, ನಿಮ್ಮ ಕರಾರು ಏನು? ಬೇಗ ಹೇಳಿರಿ'' ಎಂದು ಇಬ್ಬರೂ ಆತುರದಿಂದ ಕೇಳಿದರು.

''ನನಗೆ ಎರಡು ವಸ್ತುಗಳು ಬಹಳ ಪ್ರಿಯವಾಗಿವೆ. ಅವುಗಳನ್ನು ತವರೂರಿನಿಂದ ಬರುವಾಗ ತೆಗೆದುಕೊಂಡು ಬರಬೇಕು. ತಾರದೆ ನೀವು ಈ ಮನೆಯ ಹೊಸ್ತಿಲು ಮೆಟ್ಟಬಾರದು. ಒಪ್ಪುತ್ತೀರಾ?'' ಎಂದು ಅತ್ತೆ ಕೇಳಿದಳು. ಅದಕ್ಕೆ ಅವರು ಸಮ್ಮತಿಸಿದರು.

ಆಗ ಅತ್ತೆಯು ಹಿರಿಯ ಸೊಸೆಗೆ. ''ಉರಿಯುವ ಬೆಂಕಿಯನ್ನು ಕಾಗದದಲ್ಲಿ ಸುತ್ತಿ ತರಬೇಕು'' ಎಂದು ಹೇಳಿದಳು. ಕಿರಿಯ ಸೊಸೆಗೆ ''ನೀನು ಕಾಗದದಲ್ಲಿ ಬೀಸುವ ಗಾಳಿಯನ್ನು ತರಬೇಕು. ನೆನಪಿರಲಿ'' ಎಂದಳು.

ಸೊಸೆಯರಿಗೆ ತವರೂರಿಗೆ ಹೋಗಬೇಕೆಂಬ ಆಸೆ ಇತ್ತಲ್ಲವೆ? ಆದುದರಿಂದ ಹಿಂದೆ ಮುಂದೆ ವಿಚಾರಿಸದೆ ಅವರು ಒಪ್ಪಿದರು. ಪತಿಗಳ ಅನುಮತಿ ಪಡೆದರು. ಸಡಗರದಿಂದ ತವರೂರ ಕಡೆಗೆ ನಡೆದರು. ದಾರಿಯಲ್ಲಿ ಹಿರಿಯ ಸೊಸೆಗೆ ಅತ್ತೆಯ ಕರಾರು ನೆನಪಾಯಿತು. ಗಾಬರಿಯಾದಳು. ಇದು ಹೇಗೆ ಸಾಧ್ಯ ಎಂದು ಚಿಂತಿಸುತ್ತ ಕುಳಿತಳು. ಇದನ್ನು ನೋಡಿ, ಕಿರಿಯ ಸೊಸೆಗೆ ದಿಕ್ಕೇ ತೋಚದಂತಾಯಿತು. ''ಏಕೆ ಅಕ್ಕ ಏನಾಯಿತು?'' ಎಂದು ಅವಳು ಹಿರಿಯ ಸೊಸೆಯನ್ನು ಕೇಳಿದಳು.

''ಆಗುವುದೇನು? ಬೆಂಕಿಯನ್ನು ಕಾಗದದಲ್ಲಿ ಸುತ್ತಿ ತರುವುದು ಸಾಧ್ಯವೆ? ನನಗೆ ಇನ್ನು ತವರೂರೇ ಗತಿ'' ಎಂದು ಹಿರಿಯ ಸೊಸೆ ಬಿಕ್ಕಿ ಬಿಕ್ಕಿ ಅತ್ತಳು.

''ಹೌದು ಅಕ್ಕ, ನನಗೂ ಅದೇ ಗತಿಯಾಯಿತಲ್ಲ! ಕಾಗದದಲ್ಲಿ ಬೀಸುವ ಗಾಳಿಯನ್ನು ತರಲು ಸಾಧ್ಯವೇ?'' ನಾವು ಏನೂ ಯೋಚಿಸದೆ ಹೊರಟೇ ಬಿಟ್ಟೆವು ಎಂದು ಆಕೆಯೂ ಅಳತೊಡಗಿದಳು.

ಇಬ್ಬರೂ ಮುಂದೆ ಹೋಗುವ ಯೋಚನೆ ಬಿಟ್ಟರು. ಅಲ್ಲಿಯೇ ಒಂದು ದಿನ್ನೆಯ ಮೇಲೆ ಕುಳಿತು ದುಃಖಿಸತೊಡಗಿದರು. ಇನ್ನು ತಮ್ಮ ಪತಿಗಳ ಮುಖ ನೋಡುವ ಭಾಗ್ಯ ತಮಗೆ ಇಲ್ಲವೆಂದು ಬಹಳ ಚಿಂತಿಸತೊಡಗಿದರು.

ಅದೇ ಹೊತ್ತಿಗೆ ಆ ದಾರಿಗುಂಟ ಒಬ್ಬ ಅಜ್ಜಿ ಬಂದಳು. ''ಏಕೆ ಅಳುತ್ತಿದ್ದೀರಿ ?'' ಎಂದು ಆಕೆ ಅವರನ್ನು ಕೇಳಿದಳು. ಅವರು ಎಲ್ಲ ಸಂಗತಿಯನ್ನೂ ತಿಳಿಸಿದರು. ಅವರನ್ನು ಸಮಾಧಾನ ಮಾಡಿ ಅಜ್ಜಿ ತನ್ನ ಮನೆಗೆ ಕರೆದುಕೊಂಡು ಹೋದಳು.

ಮೂವರೂ ಮನೆಯ ಪಡಸಾಲೆಯಲ್ಲಿ ಕುಳಿತು ಯೋಚಿಸತೊಡಗಿದರು. ಆಗ ಅಜ್ಜಿಗೆ ಒಂದು ಉಪಾಯ ಹೊಳೆಯಿತು. ಅವಳು ಥಟ್ಟನೆ ಎದ್ದು ಒಳಗೆ ಹೋದಳು. ಸ್ವಲ್ಪ ಹೊತ್ತಿನಲ್ಲಿ ಮತ್ತೆ ಹೊರಗೆ ಬಂದಳು. ಅವಳ ಕೈಯಲ್ಲಿ ಒಂದು ಸುಂದರವಾದ ಆಕಾಶಬುಟ್ಟಿ ಇತ್ತು. ಅದರ ಒಳಗೆ ಒಂದು ಮೇಣಬತ್ತಿ ಉರಿಯುತ್ತಿತ್ತು. ''ಇದೇ ನಿನ್ನ ಅತ್ತೆ ಬೇಡಿದ ವಸ್ತು'' ಎಂದು ಅಜ್ಜಿ ಹೇಳಿದಳು. ಹಿರಿಯ ಸೊಸೆಯ ಮುಖ ಅರಳಿತು.

ಅಜ್ಜಿ ಮತ್ತೆ ಒಳಗೆ ಹೋದಳು. ಒಂದು ಕಾಗದದ ಬೀಸಣಿಕೆಯನ್ನು ತಂದು ಕಿರಿಯ ಸೊಸೆಗೆ ಕೊಟ್ಟಳು. ''ನೀನು ಬೀಸುವ ಗಾಳಿ ಒಯ್ಯಬೇಕಲ್ಲವೆ? ಇದು ನಿನ್ನ ಅತ್ತೆಗೆ ಸರಿಯಾದ ಕಾಣಿಕೆ'' ಎಂದು ಅವಳು ಹೇಳಿದಳು. ಕಿರಿಯ ಸೊಸೆಯೂ ಹಿರಿಹಿರಿ ಹಿಗ್ಗಿದಳು. ಇಬ್ಬರೂ ಅಜ್ಜಿಗೆ ಧನ್ಯವಾದಗಳನ್ನು ಹೇಳಿ ತಮ್ಮ ತವರೂರಿಗೆ ನಡೆದರು.

ಸೊಸೆಯರು ತಿಂಗಳ ಕಾಲ ತವರೂರಿನಲ್ಲಿ ಹಾಯಾಗಿ ಇದ್ದರು. ಬಳಿಕ ಒಂದು ದಿನ ತಮ್ಮ ಅತ್ತೆಯ ಮನೆಗೆ ಮರಳಿದರು. ಅತ್ತೆಯು ಮನೆಯ ಹೊಸ್ತಿಲಲ್ಲಿಯೇ ನಿಂತಿದ್ದಳು. ಸೊಸೆಯರು ಮನೆಯ ಬಾಗಿಲ ಬಳಿ ಬಂದಾಗ ಫೌಚೌ ಸಿಟ್ಟಿನಿಂದ ''ನಾನು ತರಲು ಹೇಳಿದ ವಸ್ತುಗಳು ಎಲ್ಲಿವೆ ?'' ಎಂದು ಕೇಳಿದಳು.

ಹಿರಿಯ ಸೊಸೆ ಆಕಾಶಬುಟ್ಟಿಯನ್ನು ಎತ್ತಿ ಹಿಡಿದಳು. ಕಿರಿಯ ಸೊಸೆ ಕಾಗದದ ಬೀಸಣಿಕೆ ತೆಗೆದು ಅತ್ತೆಯ ಮುಖಕ್ಕೆ ತಂಪಾದ ಗಾಳಿ ಬೀಸಿದಳು.

ಫೌಚೌ ಅಚ್ಚರಿಪಟ್ಟಳು. ''ಒಳ್ಳೆಯದು ನನ್ನ ಕರಾರಿನಂತೆ ನೀವು ನಡೆದಿದ್ದೀರಿ. ನಾನು ಬೇಡಿದ ವಸ್ತುಗಳನ್ನು ತಂದಿದ್ದೀರಿ, ಒಳಗೆ ಬನ್ನಿರಿ'' ಎಂದಳು.

ಅಂದು ಎಲ್ಲರೂ ಚಹ ಕುಡಿಯುತ್ತಿದ್ದಾಗ ಕಾಗದದ ಆಕಾಶಬುಟ್ಟಿಯ ಒಳಗೆ ಬೆಂಕಿ ಉರಿಯುತ್ತಲೇ ಇತ್ತು. ಕಿರಿಯ ಸೊಸೆ ಕಾಗದದ ಬೀಸಣಿಕೆಯನ್ನು ಆಡಿಸುವಾಗ ತಂಪಾದ ಗಾಳಿ ಬೀಸುತ್ತಲೇ ಇತ್ತು.

**ಶಬ್ದಗಳ ಅರ್ಥ**

ಹಾಯಾಗಿ – ಸಂತೋಷದಿಂದ, ಅಚ್ಚರಿ – ಅಶ್ಚರ್ಯ.

***ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.**

ಕರಾರು __________ ; ಹೊಸ್ತಿಲು __________ ; ಸಡಗರ __________

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಸೊಸೆಯಂದಿರರು ಅತ್ತೆಯ ಜೊತೆಗೆ ಯಾವರೀತಿ ನಡೆದುಕೊಳ್ಳುತ್ತಿದ್ದರು ?

_______________________________________________

ಆ) ತವರು ಮನಗೆ ಹೋಗಲು ಅತ್ತೆ ಹಾಕಿದ ಕರಾರು ಯಾವುದು ?

_______________________________________________

ಇ) ಸೊಸೆಯಂದಿರರು ಏಕೆ ದುಃಖಿಸತೊಡಗಿದರು ?

_______________________________________________

**ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

**ಅ)** ______________________________

**ಉತ್ತರ** ______________________________

**ಆ)** ______________________________

**ಉತ್ತರ** ______________________________

**ಪ್ರಶ್ನೆ ೩) ಬಿಟ್ಟಸ್ಥಳ ತುಂಬಿರಿ.**

೧) ............... ದೇಶದ ಊರಲ್ಲಿ ಪೌಚೌ ಎಂಬ ಮಹಿಳೆ ಇದ್ದಳು.
೨) ಒಮ್ಮೆ ಸೊಸೆಯರಿಬ್ಬರಿಗೂ ............... ಹೋಗಿ ಬರಬೇಕೆಂಬ ಆಸೆಯಾಯಿತು.
೩) ಎರಡು ವಸ್ತುಗಳು ನನಗೆ ಬಹಳ ...............
೪) ............... ತವರೂರು ಕಡೆಗೆ ನಡೆದರು.
೫) ಮೂವರು ಮನೆಯ ............... ಕುಳಿತು ಯೋಚಿಸತೊಡಗಿದರು.

**ಪ್ರಶ್ನೆ ೪) ಕೆಳಗಿನ ವಾಕ್ಯಗಳಲ್ಲಿಯ ಏಕವಚನ ಮತ್ತು ಬಹುವಚನಗಳನ್ನು ಗುರುತಿಸಿ ಅವುಗಳ ಕೆಳಗೆ ಗುರುತು ಹಾಕಿರಿ.**

ಅ) ರಾಮನು ಶಾಲೆಗೆ ಬಂದನು.
ಆ) ರೈತರು ಒಕ್ಕಲುತನ ಮಾಡುವರು.
ಇ) ಮಂಗ ಮರ ಏರಿತು.
ಈ) ಗುಬ್ಬಿಗಳು ಹಾರಿ ಹೋದವು.

**ಉಪಕ್ರಮ :** ನಿಮ್ಮ ಗೆಳೆಯನ ಹುಟ್ಟು ಹಬ್ಬದ ದಿನ ಒಳಸಿಹಿ, ಹೊರಸಿಹಿ ಮತ್ತು ಪೂರ್ಣ ಸಿಹಿಯುಳ್ಳ ವಸ್ತುಗಳನ್ನು ಉಡುಗೊರೆಯಾಗಿ ನೀಡಿರಿ.

**ಅವಶ್ಯಕತೆಯೇ ಅನ್ವೇಷಣೆಯ ಜನನಿ**

# ೬ ಮೇಡಂ ಕಾಮಾ



ಮೇಡಂ ಕಾಮಾ ಒಬ್ಬ ಕ್ರಾಂತಿಕಾರಿಣಿ. ಖಡ್ಗ ಹಿಡಿದು ಯುದ್ಧ ಮಾಡುವುದು ಒಂದು ಬಗೆಯ ಸಾಹಸವಾದರೆ. ಅನ್ಯಾಯವನ್ನು ಪ್ರತಿಭಟಿಸುವುದೂ ಒಂದು ಸಾಹಸವೇ. ವಿಶೇಷ ಸಂದರ್ಭ ಸನ್ನಿವೇಶಗಳಲ್ಲಿ ಬಂಡೆದ್ದು ಹೋರಾಡಿದವರಲ್ಲಿ ಮೇಡಂ ಕಾಮಾ ಒಬ್ಬರು.

ಮುಂಬಯಿಯಲ್ಲಿ ೨೪ ಸಪ್ಟೆಂಬರ ೧೮೬೧ ರಂದು ಕಾಮಾ ಜನಿಸಿದಳು. ಕಾಮಾ ಮುಂಬಯಿಯ ಪಾರ್ಸಿ ಬಾಲಕಿಯರ ಶಾಲೆಯಲ್ಲಿ ಓದಿದಳು. ಅವಳು ಚಿಕ್ಕಂದಿನಲ್ಲಿಯೇ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದಳು. ದೇಶಕ್ಕಾಗಿ ಬಲಿದಾನ ಮಾಡಿದ ಹುತಾತ್ಮರನ್ನು ಅಭಿಮಾನದಿಂದ ಗೌರವಿಸುತ್ತಿದ್ದಳು. ಅವಳು ಬೆಳೆಯುತ್ತಲೇ ಭಾರತ ಸ್ವಾತಂತ್ರ್ಯದ ಕನಸು ಕಾಣುತ್ತಿದ್ದಳು. ಅನೇಕ ದೇಶಭಕ್ತರ ಪರಿಚಯ ಮಾಡಿಕೊಂಡಳು. ಮಹಾನ್ ದೇಶಭಕ್ತ ದಾದಾಭಾಯಿ ನವರೋಜಿಯವರ ಆಪ್ತ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದಳು.

೧೯೦೭ರ ಅಗಷ್ಟನಲ್ಲಿ ಜರ್ಮನಿಯ ಸ್ಟುಟ್‌ಗರ್ಟ ಎಂಬಲ್ಲಿ ಒಮ್ಮೆ ಸಮ್ಮೇಳನ ಜರುಗಿತು. ಅಲ್ಲಿ ಪ್ರಪಂಚದ ಹಲವು ರಾಷ್ಟ್ರಗಳಿಂದ ಪ್ರತಿನಿಧಿಗಳು ಆಗಮಿಸಿದ್ದರು. ಒಂದೊಂದು ದೇಶದ ಪ್ರತಿನಿಧಿಗಳು ವೇದಿಕೆಯ ಮೇಲೆ ಕಾಣಿಸಿಕೊಳ್ಳುತ್ತಿದ್ದರು. ಭಾರತದ ಹೆಸರು ಬಂದಾಗ ಕಾಮಾ ವೇದಿಕೆ ಹತ್ತಿ ಮಾತನಾಡಿದಳು. ಆ ಮಾತು ಎಲ್ಲರ ಗಮನಸೆಳೆಯಿತು.

ಕಾಮಾ ಮಾತನಾಡಿ, ''ಭಾರತ ದಾಸ್ಯದಲ್ಲಿದೆ. ಜಗತ್ತಿನ ಸ್ವಾತಂತ್ರ ಪ್ರೇಮಿಗಳೆ ಎಲ್ಲರೂ ಭಾರತವನ್ನು ದಾಸ್ಯದಿಂದ ಮುಕ್ತಗೊಳಿಸಲು ಸಹಕರಿಸಬೇಕು.'' ಎಂದು ಮನವಿಮಾಡಿದಳು. ಅಲ್ಲದೇ ಭಾರತವನ್ನೇ ಲೂಟಿ ಮಾಡುತ್ತಿದೆ ಎಂದು ಬ್ರಿಟಿಷ್ ಸರ್ಕಾರವನ್ನು ಖಂಡಿಸಿದಳು. ತನ್ನ ಭಾಷಣದ ಕೊನೆಯಲ್ಲಿ ಧೈರ್ಯದಿಂದ ಭಾರತೀಯ ಧ್ವಜವನ್ನು ಬಿಚ್ಚಿಹಾರಿಸುತ್ತ ''ಇದೋ ನೋಡಿ, ನಮ್ಮ ಈ ಧ್ವಜ ಭಾರತದ ಸ್ವಾತಂತ್ರ್ಯದ ಕುರುಹು. ಭಾರತೀಯ ರೆಲ್ಲರಿಗೂ ಈ ಬಾವುಟ ಪವಿತ್ರ. ತಾವೆಲ್ಲ ಭಾರತದ ವಿಮೋಚನೆಗಾಗಿ ನೆರವಾಗಬೇಕು.'' ಎಂದು ಪ್ರಾರ್ಥಿಸಿದಳು.

ಹೊರದೇಶದಲ್ಲಿ ಬೇರೆ ಬೇರೆ ರಾಷ್ಟ್ರಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ಮೊಟ್ಟಮೊದಲಿಗೆ ಭಾರತದ ಧ್ವಜವನ್ನು ಹಾರಿಸಿದ ದಿಟ್ಟ ಮಹಿಳೆ ಎಂದು ಸಭಿಕರು ಅವಳನ್ನು ಕೊಂಡಾಡಿದರು. ಎಲ್ಲರೂ ಎದ್ದು ನಿಂತು ಧ್ವಜಕ್ಕೆ ವಂದನೆ ಸಲ್ಲಿಸಿದರು.

ಈ ತ್ರಿವರ್ಣ ಧ್ವಜವನ್ನು ಕ್ರಾಂತಿಕಾರಿ ಹೋರಾಟಗಾರ ವೀರ ಸಾವರಕರ, ಕಾಮಾ ಮತ್ತಿತರ ದೇಶಭಕ್ತರು ಸೇರಿ ೧೯೦೫ ರಲ್ಲಿ ರಚಿಸಿದರು. ಇದು ಭಾರತದ ಮೊದಲ ಧ್ವಜವಾಗಿತ್ತು. ಅದು ಹಸಿರು, ಕೇಸರಿ ಮತ್ತು ಕೆಂಪುಬಣ್ಣಗಳಿಂದ ಕೂಡಿದ್ದು ನಡುವೆ ''ವಂದೇ ಮಾತರಂ'' ಎಂದು ಬರೆಯಲಾಗಿತ್ತು.

ಜರ್ಮನ್, ಅಮೇರಿಕಾ, ಫ್ರಾನ್ಸ ಮುಂತಾದ ಪ್ರಮುಖ ರಾಷ್ಟ್ರಗಳನ್ನು ಸುತ್ತಾಡಿ ಬ್ರಿಟಿಷ್ ಸರಕಾರದ ದಬ್ಬಾಳಿಕೆಯನ್ನು ಖಂಡಿಸಿ ಭಾಷಣ ಮಾಡುತ್ತಿದ್ದಳು. ಅಲ್ಲಿದ್ದ ಭಾರತೀಯರಲ್ಲಿ ಸ್ವಾತಂತ್ರ್ಯದ ಪ್ರೇಮ ಹುಟ್ಟಿಸುವುದೇ ಅವಳ ಉದ್ದೇಶವಾಗಿತ್ತು. ಕಾಮಾಳ ಈ ಚಟುವಟಿಕೆಗಳನ್ನು ಕಂಡು ಬ್ರಿಟೀಷ್ ಸರಕಾರವು ರೊಚ್ಚಿಗೆದ್ದು ಅವಳು ಭಾರತದಲ್ಲಿ ಕಾಲಿಡದಂತೆ ನಿರ್ಬಂಧನೆ ಹಾಕಿತು. ಹೀಗಾಗಿ ಕಾಮಾ ಮೂವತ್ತೈದು ವರ್ಷಗಳನ್ನು ಫ್ರಾನ್ಸಿನಲ್ಲಿಯೇ ಕಳೆಯಬೇಕಾಯಿತು.

ಮೇಡಂ ಕಾಮಾ ಭಾರತಕ್ಕೆ ಬರದಿದ್ದರೂ ಅವಳ ಪ್ರಭಾವ ಭಾರತದ ಮೇಲಿತ್ತು. ಕಾಮಾಳನ್ನು ಗಡಿಪಾರು ಮಾಡಿದುದರ ವಿರುದ್ಧ ಜನ ದಂಗೆ ಎದ್ದರು. ಬ್ರಿಟಿಷ ಸರಕಾರವು ಕಾಮಾಳ ವಿರುದ್ಧ ಹಾಕುತ್ತಿರುವ ನಿರ್ಬಂಧನೆಗಳನ್ನು ಖಂಡಿಸಿದರು.

೧೯೧೪ ರಲ್ಲಿ ಮೊದಲನೆಯ ಜಾಗತಿಕ ಮಹಾಯುದ್ಧ ಆರಂಭವಾಯಿತು. ಇದರಿಂದ ಕಾಮಾಳ ಸ್ವಾತಂತ್ರ್ಯ ಹೋರಾಟಕ್ಕೆ ಬಲ ಬಂದಿತು. ಅವಳು ಯುದ್ಧ ದಲ್ಲಿ ಭಾರತೀಯ ಸೈನಿಕರನ್ನು ಹುರಿದುಂಬಿಸಿದಳು.

''ನಾನು ಭಾರತಕ್ಕೆ ಮರಳಿ ಬರಬೇಕು, ನನ್ನ ದೇಶದಲ್ಲಿ ಕೊನೆಯ ದಿನಗಳನ್ನು ಕಳೆಯಬೇಕು'' ಎಂದು ಬ್ರಿಟಿಷ್ ಸರಕಾರಕ್ಕೆ ಮನವಿಸಲ್ಲಿಸಿದಳು. ಆದಕ್ಕೆ ಸರಕಾರವು 'ಕಾಮಾ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಬಾರದು'' ಎಂಬ ಷರತ್ತಿನ ಮೇಲೆ ಒಪ್ಪಿಗೆ ನೀಡಿತು. ಈ ಷರತ್ತಿಗೆ ಕಾಮಾಳ ಮನಸ್ಸು ಒಪ್ಪದಿದ್ದರೂ ಬಂಧುಗಳ ಒತ್ತಾಯದಿಂದ ಒಪ್ಪಿಕೊಂಡಳು. ತನ್ನ ಎಪ್ಪತ್ತರ ಇಳಿವಯಸ್ಸಿನಲ್ಲಿ ಕಾಮಾ ತನ್ನ ತಾಯ್ನಾಡಿಗೆ ಮರಳಿಬಂದಳು. ಭಾರತಕ್ಕೆ ಬಂದರೂ ಕಾಮಾ ಮನೆಗೆ ಬರಲಿಲ್ಲ, ಅನಾರೋಗ್ಯದಿಂದ ಅವಳು ಆಸ್ಪತ್ರೆ ಸೇರಬೇಕಾಯಿತು. ೧೩ ಅಗಸ್ಟ ೧೯೩೬ ರಂದು ಕಾಮಾ ಆಸ್ಪತ್ರೆಯಲ್ಲಿಯೇ ತೀರಿಕೊಂಡಳು.

ಕಾಮಾ ವಿದೇಶಗಳಲ್ಲಿ ಭಾರತದ ಸ್ವಾತಂತ್ರ್ಯದ ಕಹಳೆ ಮೊಳಗಿಸಿದ ವೀರ ನಾರಿ. ಅವಳ ರಕ್ತದ ಕಣಕಣದಲ್ಲೂ ಸ್ವಾತಂತ್ರ್ಯದ ದಾಹ ಅಡಗಿತ್ತು. ೧೧ ವರ್ಷಗಳ ನಂತರ ಕಾಮಾಳ ಆಸೆ ನೆರವೇರಿತು. ೧೫ ಅಗಸ್ಟ ೧೯೪೭ ರಂದು ಭಾರತಕ್ಕೆ ಸ್ವಾತಂತ್ರ್ಯ ದೊರೆಯಿತು.

– ಆರ್.ಡಿ.ಜಿ

### ಶಬ್ದಗಳ ಅರ್ಥ

ಪ್ರತಿಭಟಿಸು – ವಿರೋಧಿಸು; ಹುತಾತ್ಮ – ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದವ; ಗಮನ – ಲಕ್ಷ್ಯ; ಮುಕ್ತ – ಬಿಡುಗಡೆ, ವಿಮೋಚನೆ; ಬಾವುಟ – ಧ್ವಜ;

***ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.**

ಕೊಂಡಾಡು ________ ; ದಬ್ಬಾಳಿಕೆ ________ ; ನಿರ್ಬಂಧನೆ ________ ; ಷರತ್ತು ________

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಕಾಮಾ ಚಿಕ್ಕಂದಿನಲ್ಲಿ ಏನು ಮಾಡುತ್ತಿದ್ದಳು ?

________________________________

ಆ) ಜರ್ಮನ್ ಸಮ್ಮೇಳನದಲ್ಲಿ ಕಾಮಾ ಏನೆಂದು ಮನವಿಮಾಡಿದಳು ?

________________________________

ಇ) ಬ್ರಿಟಿಷ ಸರಕಾರವು ಕಾಮಾಳ ಮೇಲೆ ಏಕೆ ನಿರ್ಬಂಧನೆ ಹಾಕಿತು ?

________________________________

**ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

**ಅ)** ________________

**ಉತ್ತರ** ________________

**ಆ)** ________________

**ಉತ್ತರ** ________________

**ಪ್ರಶ್ನೆ ೩) ಹೊಂದಿಸಿ ಬರೆಯಿರಿ.**

| 'ಅ' ಗುಂಪು | | 'ಬ' ಗುಂಪು |
|---|---|---|
| ೧) ೧೮೬೧ | | (ಅ) ಮೊದಲ ಜಾಗತಿಕ ಯುದ್ಧ |
| ೨) ಜರ್ಮನಿ | | (ಆ) ಧ್ವಜ |
| ೩) ತ್ರಿವರ್ಣ | | (ಇ) ಕಾಮಾಳ ಜನನ |
| ೪) ೧೯೪೭ | | (ಈ) ಭಾರತಕೆ ಸ್ವಾತಂತ್ರ್ಯ ದೊರೆಯಿತು. |
| ೫) ೧೯೧೪ | | (ಉ) ಸ್ಟುಟ್‌ಗರ್ಟ |

**ಪ್ರಶ್ನೆ ೪) ಬಿಟ್ಟ ಸ್ಥಳ ತುಂಬಿರಿ.**

ಅ) ಮೇಡಂ ಕಾಮಾ ಒಬ್ಬ ..................

ಆ) ಮಹಾನ ದೇಶಭಕ್ತ .................. ಆಪ್ತ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದಳು.

ಇ) .................. ಆಗಸ್ಟನಲ್ಲಿ ಜರ್ಮನಿಯ ಸ್ಟುಟ್‌ಗರ್ಟ ಸಮ್ಮೇಳನ ಜರುಗಿತು.

ಈ) ಭಾರತೀಯರೆಲ್ಲರಿಗೂ ಈ ಬಾವುಟ ..................

ಉ) ಅವಳು .................. ಭಾರತೀಯ ಸೈನಿಕರನ್ನು ಹುರಿದುಂಬಿಸಿದರು.

ಊ) ಕಾಮಾ ದೇಶ ವಿದೇಶಗಳಲ್ಲಿ .................. ಕಹಳೆ ಮೊಳಗಿಸಿದ ವೀರಮಹಿಳೆ.

**ಉಪಕ್ರಮ :** ಭಾರತದ ರಾಷ್ಟ್ರಧ್ವಜದ ವೈಶಿಷ್ಟ್ಯಗಳ ಬಗ್ಗೆ ಪಾಲಕರಿಂದ/ಶಿಕ್ಷಕರಿಂದ ಕೇಳಿ ತಿಳಿದುಕೊಳ್ಳಿರಿ.

# ರಾಷ್ಟ್ರಭಕ್ತಿ ಜೀವಶಕ್ತಿ



# ೧೦ ಮೈಸೂರು ದಸರಾ

ಬನ್ನಿರಿ ಬನ್ನಿರಿ ಗೆಳೆಯರೆ ಬನ್ನಿರಿ
ಸಂಸ್ಕೃತಿನಗರಿ ಮೈಸೂರಿಗೆ
ವಿಶ್ವವಿಖ್ಯಾತ ದಸರಾ ನೋಡುತ
ನಮಿಸುತ ಚಿನ್ನದ ಅಂಬಾರಿಗೆ

ಸಾವಿರ ಮೆಟ್ಟಿಲ ಚಾಮುಂಡಿ ಬೆಟ್ಟವ
ಮೇಲಕೆ ಮೇಲಕೆ ಹತ್ತೋಣ
ಮಹಿಷಾಸುರನ ದಿಟ್ಟಿಸಿ ನೋಡುತ
ಬೆಟ್ಟದ ನಂದಿಗೆ ನಮಿಸೋಣ

ಚಿಲಪಿಲಿ ನಾದವ ಕೇಳುತನಾವು
'ಝೂ' ನೋಡಲು ಹೋಗೋಣ
ಬಿಳಿಹುಲಿ ನೋಡುತ ಮುಂದಕೆ- ಸಾಗುತ
ಚಿಂಪಾಂಜಿಗೆ ಹಲೊ ಎನ್ನೋಣ

ರವಿವರ್ಮನ ಆ ಕುಂಚದ ಕಲೆಯನು
ಕಣ್ಮನದಿ ಸೆರೆ ಹಿಡಿಯೋಣ
ಬಣ್ಣ ಬಣ್ಣದ ರಂಗನು ಅರಿಯುತ
ದಸರಾ ದರ್ಬಾರ ನೋಡೋಣ

ಬನ್ನಿರಿ ಬನ್ನಿರಿ ಗೆಳೆಯರೆ ಬನ್ನಿರಿ
ಬನ್ನಿ ಮಂಟಪಕೆ ಸಾಗೋಣ
ಮೈಸೂರು ಅರಸರ ಶ್ರೇಷ್ಠ ಪರಂಪರೆ
ಯುಗ ಯುಗಗಳಲಿ ಉಳಿಸೋಣ

– ಎಂ. ವಿವೇಕ್ ಭರಣಿ



**ಶಬ್ದಗಳ ಅರ್ಥ**

ವಿಶ್ವವಿಖ್ಯಾತ - ಜಗತ್ಪ್ರಸಿದ್ಧ; ನಾದ - ಶಬ್ದ , ಧ್ವನಿ

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ವಿಶ್ವವಿಖ್ಯಾತ ದಸರಾ ಯಾವ ಊರಿನಲ್ಲಿ ನಡೆಯುತ್ತದೆ?

ಆ) ನಾವು ಯಾವ ಬೆಟ್ಟವ ಹತ್ತೋಣ ?

ಇ) ಚಿಲಿಪಿಲಿ ನಾದವು ಎಲ್ಲಿ ಕೇಳಿ ಬರುತ್ತದೆ ?

**ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

**ಅ)** ______

**ಉತ್ತರ** ______

**ಆ)** ______

**ಉತ್ತರ** ______

**ಪ್ರಶ್ನೆ ೩) ಮೈಸೂರು ನಗರದ ವರ್ಣನೆಯನ್ನು, ನಿಮ್ಮ ಮಾತುಗಳಲ್ಲಿ ಬರೆಯಿರಿ.**

**ಉಪಕ್ರಮ :** ಪ್ರಾಣಿ ಸಂಗ್ರಹಾಲಯಕ್ಕೆ ಭೇಟಿಕೊಟ್ಟು ಅಲ್ಲಿಯ ಮಾಹಿತಿಯನ್ನು ಪಡೆದುಕೊಳ್ಳಿರಿ.

## ಐತಿಹಾಸಿಕ ನಗರ, ಕುತೂಹಲಗಳ ಆಗರ



# ೧೧ ಖೋ ಖೋ ಆಟ



ಹಿಂದಿನ ಕಾಲದಲ್ಲಿ ಬಹಳ ಕಂಬಗಳುಳ್ಳ ದೇವಾಲಯಗಳಲ್ಲಿ ಖೋ ಖೋ ಆಟ ಆಡುವ ರೂಢಿಯಿತ್ತು. ಅದರಲ್ಲೂ ಹೆಚ್ಚಾಗಿ ಹುಡುಗಿಯರೇ ಈ ಆಟವಾಡುತ್ತಿದ್ದರು. ದೇವಾಲಯದ ಒಂದೊಂದು ಕಂಬಕ್ಕೆ ಒಬ್ಬೊಬ್ಬರು ನಿಂತು, ಕಂಬದಿಂದ ಕಂಬಕ್ಕೆ ಓಡುತ್ತಿದ್ದರು. 'ಕಳ್ಳಿ' ಎಂದು ಆಯ್ಕೆಯಾದವಳು ಓಡುವವರನ್ನು ಮುಟ್ಟಲು ಪ್ರಯತ್ನಿಸುತ್ತಿದ್ದಳು. ಅವಳ ಕೈಗೆ ಸಿಕ್ಕವಳು ಹೊಸ ಕಳ್ಳಿಯಾಗಿ ಆಟವನ್ನು ಮುಂದುವರಿಸುತ್ತಿದ್ದಳು. ಈ ಆಟವೇ ಮುಂದೆ ಬದಲಾಗುತ್ತ ಇಂದಿನ ಖೋ ಖೋ ಆಟವೆಂದು ಹೆಸರಾಯಿತು. ಈ ಆಟಕ್ಕಾಗಿ ಸರಳ ನಿಯಮಗಳೂ ರಚಿತವಾದುವು. ಆ ನಿಯಮಗಳನ್ನು ಅರಿತುಕೊಂಡು, ಹುಡುಗರೂ ಅಭಿಮಾನದಿಂದ ಈ ಆಟವನ್ನು ಆಡಲಾರಂಭಿಸಿದರು. ಇದೊಂದು ಜನಪ್ರಿಯ ಭಾರತೀಯ ಆಟವೆಂದು ಹೆಸರಾಯಿತು.

ಈ ಆಟದಲ್ಲಿ ಎರಡು ತಂಡಗಳಿರುವವು. ಒಂದು ಓಡುವ ತಂಡ, ಮತ್ತೊಂದು ಮುಟ್ಟುವ ತಂಡ ಪ್ರತಿತಂಡದಲ್ಲಿ ಒಂಭತ್ತು ಜನ ಆಟ ಆಡುವರು. ಯಾರು ಓಡಬೇಕು, ಯಾರು ಮುಟ್ಟಬೇಕು– ಎಂಬುದನ್ನು ಆಟ ಆರಂಭಿಸುವ ಮೊದಲೇ ನಾಣ್ಯ ಹಾರಿಸಿ ನಿರ್ಧರಿಸುವರು.

ಖೋ ಖೋ ಆಟದ ಅಂಗಣ ೩೧ ಮೀಟರ ಉದ್ದ ಮತ್ತು ೧೬ ಮೀಟರ ಅಗಲ ಇರುವುದು. ಅಂಗಣದ ಎರಡೂ ಕೊನೆಗಳಲ್ಲಿ ೧೬ ಮೀಟರ ಉದ್ದ ಮತ್ತು ೪.೮ ಮೀಟರ ಅಗಲವಾದ ಎರಡು ಆಯತಗಳಿರುವುದು. ಅಂಗಣದ ಮಧ್ಯದಲ್ಲಿ ೨೪.೪ ಮೀಟರ ಉದ್ದ, ೩೦ ಸೆಂ.ಮೀ. ಅಗಲವಾದ ಮಧ್ಯಪಟ್ಟಿ ಇರುವುದು. ಅದರ ಮೇಲೆ ಸಮಸಮವಾದ ಅಂತರದಲ್ಲಿ ೨೪೦ ಸೆಂ. ಮೀ. ಅಳತೆಯ ೮ ಚೌಕಗಳಿರುವುವು. ಮಧ್ಯಪಟ್ಟಿ ಮತ್ತು ಕಂಬದ ಗೆರೆ ಕೂಡುವಲ್ಲಿ ಎರಡು ಕಡೆಗಳಲ್ಲಿ ಒಂದೊಂದು ಕಂಬವನ್ನು ನೆಟ್ಟಿರುವರು. ಅವು ನೆಲದಿಂದ ೧೨೦ ಸೆ.ಮೀ. ಎತ್ತರವಿರುವವು. ಹೀಗೆ ಆಟದ ಅಂಗಣ ರಚಿಸಿಕೊಂಡು ಮುಟ್ಟುವ ತಂಡದ ಎಂಟು ಜನ ಒಂದೊಂದು ಚೌಕದಲ್ಲಿ ಒಬ್ಬೊಬ್ಬರಂತೆ ಕುಳಿತುಕೊಳ್ಳುವರು. ಒಬ್ಬನು ಒಂದು ದಿಕ್ಕಿಗೆ ಮುಖ ಮಾಡಿದರೆ ಅವನ ಬದಿಯಲ್ಲಿ ಕುಳಿತವನು ಅವನ ವಿರುದ್ಧ ದಿಕ್ಕಿಗೆ ಮುಖ ಮಾಡುವನು. ಅಂದರೆ ಎಂಟು ಚೌಕಗಳ ಮೇಲೆ ಕುಳಿತವರಲ್ಲಿ ಒಬ್ಬನನ್ನು ಬಿಟ್ಟು ಒಬ್ಬನಂತೆ ನಾಲ್ಕು ಜನ ಒಂದು ದಿಕ್ಕಿಗೆ, ಉಳಿದ ನಾಲ್ಕು ಜನ ಅದರ ವಿರುದ್ಧ ದಿಕ್ಕಿಗೆ ಮುಖ ಮಾಡಿ ಕುಳಿತುಕೊಳ್ಳಬೇಕು. ಈ ತಂಡದ ಒಂಬತ್ತನೆಯ ಆಟಗಾರನು ಮುಟ್ಟುವುದನ್ನು ಆರಂಭಿಸುವ ತಯಾರಿಯಲ್ಲಿ ಒಂದು ಕಂಬದ ಬಳಿ ನಿಲ್ಲುತ್ತಾನೆ.

ಆಟ ಆರಂಭವಾಗುವ ಮೊದಲು ಓಡುವ ತಂಡದ ಮೂವರು ಆಟಗಾರರು ಅಂಗಣದ ಗೆರೆಯೊಳಗೆ ಬಂದು ನಿಲ್ಲುವರು. ಪಂಚನು ಸೀಟಿ ಊದಿದೊಡನೆ ಈ ಮೂವರು ಒಂದು ದಿಕ್ಕು ಹಿಡಿದು ಓಡತೊಡಗುವರು.ಮುಟ್ಟುವ

ಆಟಗಾರನು ಓಡುವವರನ್ನು ಅಟ್ಟಿಸಿಕೊಂಡು ಹೋಗುವನು. ಓಡುವವರು ಈತನ ಕೈಗೆ ಸಿಗದಂತೆ ಓಡುತ್ತ ತಪ್ಪಿಸಿಕೊಳ್ಳಲು ಯತ್ನಿಸುತ್ತಾರೆ. ಅದಕ್ಕಾಗಿ ಅವರು ಅತ್ತಿಂದತ್ತ, ಇತ್ತಿಂದತ್ತ ನುಣುಚಿಕೊಳ್ಳುವರು. ಓಡುವವನಿಗೆ ಯಾರನ್ನೂ ಮುಟ್ಟಲಾಗದಿದ್ದರೆ, ಅಥವಾ ಕುಳಿತವರಲ್ಲಿ ಯಾರೊಬ್ಬರೂ ಥಟ್ಟನೆ ಎದ್ದು ಎದುರಿಗೆ ಬಂದವರನ್ನು ಮುಟ್ಟುವುದು ಅನೂಕೂಲವೆನಿಸಿದರೆ, ಓಡುವವನು ಕುಳಿತವರಲ್ಲಿ ಒಬ್ಬನಿಗೆ ಖೋ ಕೊಡುವನು. ಕುಳಿತವರ ಬೆನ್ನಿಗೆ ಕೈ ತಟ್ಟಿ ಖೋ ಕೊಡಬೇಕು ಎಂಬುದನ್ನು ನೆನಪಿಡಬೇಕು. ಖೋ ಕೊಟ್ಟ ಕೂಡಲೇ ಕುಳಿತವನು ಎದ್ದು ಓಡುವವರನ್ನು ಮುಟ್ಟಲು ಧಾವಿಸುವನು. ಖೋ ಕೊಟ್ಟವನು ಎದ್ದವನ ಸ್ಥಳದಲ್ಲಿ ಕೂಡುವನು. ಮುಟ್ಟಿಸಿಕೊಂಡ ಹುಡ್ದರಿಯು ಆಟದಿಂದ ಹೊರಗೆ ಉಳಿಯುವನು. ಹೀಗೆ ಓಡುವವರು ಅಂಗಣದ ಗೆರೆಯೊಳಗೇ ಓಡಬೇಕು. ಮುಟ್ಟುವವರು ನಡು-ನಡುವೆ ದಿಕ್ಕು ಬದಲಾಯಿಸದೇ ಒಂದೇ ದಿಕ್ಕು ಹಿಡಿದು ಓಡಬೇಕು. ಓಡೋಡುತ್ತ ಯಾರಿಗೆ ಖೋ ಕೊಟ್ಟರೆ, ಥಟ್ಟನೆ ಎದುರಾಳಿಯನ್ನು ಮುಟ್ಟುವುದು ಸುಲಭವೆಂದು ನಿರ್ಧರಿಸಿ ಕೂಡಲೇ ಖೋ ಕೊಡಬೇಕು.

ಪ್ರತಿಯೊಂದು ತಂಡದವರಿಗೆ ಏಳೇಳು ನಿಮಿಷಗಳ ಎರಡು ಸರದಿ ಬರುವುವು. ಒಮ್ಮೆ ಓಡಿದ ತಂಡವು ಮತ್ತೊಂದು ಸರದಿಯಲ್ಲಿ ಮುಟ್ಟುವ ತಂಡವಾಗುವುದು. ಮೊದಲಿನ ತಂಡವು ಓಡುವ ತಂಡವಾಗುವುದು. ಹೀಗೆ ಎರಡೆರಡು ಸರದಿಗಳಿಂತೆ ಒಟ್ಟು ನಾಲ್ಕು ಸರದಿಗಳ ಖೋ ಖೋ ಪಂದ್ಯಾಟ ನಡೆಯುವುದು. ಏಳು ನಿಮಿಷಗಳ ಸರದಿಯಾಗುತ್ತಲೆ ಎರಡು ನಿಮಿಷಗಳು ವಿರಾಮ. ಎರಡು ಸರದಿಗಳಾದ ಬಳಿಕ ಐದು ನಿಮಿಷಗಳ ವಿರಾಮ ಇರುವುದು.

ಈ ಮೊದಲೇ ಹೇಳಿದಂತೆ ಆಟದ ಆರಂಭದಲ್ಲಿ ಮೂವರು ಓಟಗಾರರು ಅಂಗಣದಲ್ಲಿರುವರು. ಈ ಮೂವರನ್ನು ಮುಟ್ಟಿದ ಕೂಡಲೇ ಮುಂದಿನ ಮೂವರು ಓಟಗಾರರು ಅಂಗಣದಲ್ಲಿ ಬರಬೇಕು ಮುಟ್ಟುವವನು ಕುಳಿತವರ ನಡುವೆ ಹಾಯಬಾರದು, ಯಾರನ್ನೂ ಮುಟ್ಟಬಾರದು. ಓಡುತ್ತ ಮಧ್ಯಪಟ್ಟಿಯಾಚೆಗೆ ಕೈಚಾಚಿ ಓಡುವವರನ್ನು ಮುಟ್ಟಬಹುದು. ಮುಟ್ಟುವವನು ಒಂದೇ ದಿಕ್ಕಿನಲ್ಲಿ ಚಲಿಸಬೇಕು. ಕಂಬದವರೆಗೆ ಹೋದ ಬಳಿಕ ಬೇಕಾದರೆ ಅವನು ದಿಕ್ಕು ಬದಲಿಸಬಹುದು. ಕೊಟ್ಟ ವೇಳೆಯಲ್ಲಿ ಹೆಚ್ಚು ಸಂಖ್ಯೆಯ ಓಟಗಾರರನ್ನು ಮುಟ್ಟಿ ಹೆಚ್ಚಿಗೆ ಗೆಲ್ಲಂಕಗಳನ್ನು ಗಳಿಸುವ ಉದ್ದೇಶದಿಂದ ಮುಟ್ಟುವ ತಂಡದ ಆಟಗಾರರು ಚಾಣಾಕ್ಷತನದಿಂದ ಖೋ ಕೊಟ್ಟು ಓಡುವವರನ್ನು ಮುಟ್ಟಲು ಪ್ರಯತ್ನಿಸುವರು. ಮುಟ್ಟುವವರು ತಟ್ಟಿದರೆ ಅಥವಾ ಕುಳಿತವರನ್ನೇ ಬೇಕೆಂದೇ ತಗಲಿದರೆ ಅಥವಾ ಮೇರೆಗೆರೆ ದಾಟಿದರೆ ಓಡುವವರು ಆಟದ ಹೊರಗೆ (ಔಟ) ಉಳಿಯುವರು.

ನಿಯಮಾನುಸಾರವಾಗಿ ಮತ್ತು ವೇಳೆಗೆ ಸರಿಯಾಗಿ ಆಟ ನಡೆಯುವದೋ ಇಲ್ಲವೋ ಎಂದು ನೋಡಿಕೊಳ್ಳುವ ಹೊಣೆ ಪಂಚರದು. ಆಟಗಾರರ ಲೋಪದೋಷಗಳ ಮತ್ತು ಗೆಲ್ಲಂಕಗಳ ಬಗ್ಗೆ ಅವರು ನಿರ್ಣಯ ಕೊಡುವರು. ಈ ಪಂಚರಲ್ಲಿ ಭಿನ್ನಾಭಿಪ್ರಾಯ ಬಂದರೆ ಆಟದ ತಜ್ಞನು ತೀರ್ಮಾನ ಕೊಡುತ್ತಾನೆ. ಆಟದ ಗೆಲ್ಲಂಕ ಒಬ್ಬನು ಬರೆದಿಡುತ್ತಾನೆ. ಸಮಯಕ್ಕೆ ಸರಿಯಾಗಿ ಆಟದ ಸರದಿಯ ಆರಂಭಕ್ಕೂ, ಮುಕ್ತಾಯಕ್ಕೂ ಸೀಟಿ ಊದುವವನೂ ಒಬ್ಬನಿರುತ್ತಾನೆ. ಯಾವ ಯಾವ ತಂಡಕ್ಕೆ ಒಟ್ಟಿಗೆ ಎಷ್ಟು ಗೆಲ್ಲಂಕಗಳು ದೊರೆತವೆಂಬುದನ್ನು ಪಂಚರು ಸಾರುತ್ತಾರೆ. ತಮ್ಮ ತಮ್ಮ ಸರದಿಯೊಳಗೆ ಎಷ್ಟು ಓಟಗಾರರನ್ನು ಮುಟ್ಟುವರೋ ಅಷ್ಟು ಗೆಲ್ಲಂಕಗಳು ಆಯಾ ತಂಡಕ್ಕೆ ದೊರೆಯುವವು. ಈ ಗೆಲ್ಲಂಕಗಳ ಮೇಲಿಂದಲೇ ಯಾವ ತಂಡ ಗೆದ್ದಿತೆಂದೂ, ಯಾವ ತಂಡ ಸೋತಿತೆಂದೂ ನಿರ್ಣಯಿಸಲಾಗುವುದು.

ಈ ಖೋ ಖೋ ಆಟವು ಮಿಂಚಿನ ವೇಗದ ಆಟ. ಇದರಲ್ಲಿ ಮೈ-ಮನಗಳೆರಡೂ ಚುರುಕಾಗಿರಬೇಕಾಗುವುದು. ಆಟಗಾರರಲ್ಲಿ ಒಕ್ಕಟ್ಟು ಬೆಳೆಯುವುದು. ಈ ಆಟದಿಂದ ಚುರುಕುತನ, ವಿಚಾರ ಮತ್ತು ನಿರ್ಣಯಶಕ್ತಿಗಳು ಹೆಚ್ಚುವುವು. ಈ ಭಾರತೀಯ ಆಟಕ್ಕೆ ಜಾಗತಿಕ ಮನ್ನಣೆ ದೊರೆತಿರುವುದು ಅಭಿಮಾನದ ಸಂಗತಿ.

– ಶಿವಶಂಕರ ಅರಳಿಮಟ್ಟಿ

**ಶಬ್ದಗಳ ಅರ್ಥ**

ತಂಡ - ಗುಂಪು; ಅಟ್ಟಿಸಿಕೊಂಡುಹೋಗು - ಬೆನ್ನಟ್ಟು; ನುಣುಚಿಕೊಳ್ಳು - ಜಾರಿಕೊಳ್ಳು;
ಲೋಪದೋಷ - ತಪ್ಪುತಡೆ; ಗೆಲ್ಲಂಕ - ಗುಣಗಳು;

***ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.**

ವಿರಾಮ __________ ; ತೀರ್ಮಾನ __________ ; ಹುದ್ದರಿ __________

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಹಿಂದಿನ ಕಾಲದಲ್ಲಿ ಖೋ ಖೋ ಆಟವನ್ನು ಎಲ್ಲಿ ಆಡುತ್ತಿದ್ದರು ?

______________________________

ಆ) ಖೋ ಖೋ ಆಟ ಆಡುವ ವಿಧಾನ ಹೇಳಿರಿ.

______________________________

ಇ) ಖೋ ಖೋ ಆಟದ ನಿಯಮಗಳನ್ನು ಹೇಳಿರಿ.

______________________________

**ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

**ಅ)** ______________________________

**ಉತ್ತರ** ______________________________

**ಆ)** ______________________________

**ಉತ್ತರ** ______________________________

**ಪ್ರಶ್ನೆ ೩) ಯೋಚಿಸಿ ವಿಧಾನ ಪೂರ್ಣ ಮಾಡಿರಿ.**

ಅ) ಹೆಚ್ಚಾಗಿ ಹುಡುಗಿಯರೇ ಈ ಆಟವನ್ನು ಆಡುತ್ತಿದ್ದರು.
ಹಾಗಾದರೆ ನಿಮಗೆ ಗೊತ್ತಿರುವ ಆಟಗಳು ..................

ಆ) ಒಂದೊಂದು ತಂಡದಲ್ಲಿ ಒಂಭತ್ತು ಜನ ಆಡುವರು.
ಹಾಗಾದರೆ ಕಬಡ್ಡಿ ಆಟದ ಒಂದೊಂದು ತಂಡದಲ್ಲಿ ಆಡುವವರ ಸಂಖ್ಯೆ ..................

ಇ) ಪ್ರತಿಯೊಂದು ತಂಡದವರಿಗೆ ಏಳೇಳು ನಿಮಿಷಗಳ ಎರಡು ಸರದಿ ಬರುವವು.
ಹಾಗಾದರೆ ಕಬಡ್ಡಿ ಆಟದಲ್ಲಿ ಒಟ್ಟು ಬರುವ ಸರದಿಗಳ ಸಂಖ್ಯೆ ..................

**ಉಪಕ್ರಮ :** ದೇಶ-ವಿದೇಶಗಳ ಆಟಗಳ ಕುರಿತು ಶಿಕ್ಷಕರಿಂದ/ಪಾಲಕರಿಂದ ಮಾಹಿತಿ ಪಡೆದುಕೊಳ್ಳಿರಿ.

**ಸದೃಢವಾದ ಶರೀರದಲ್ಲಿ ಸದೃಢವಾದ ಮನಸ್ಸು**

# ೧೨ ಆಲೆಮನೆಯಲ್ಲೊಂದು ದಿನ



ಅಂದು ಮಂಗಳವಾರ. ಆರನೆಯ ತರಗತಿಯ ವಿದ್ಯಾರ್ಥಿಗಳು ಕೈಯಲ್ಲಿ ಊಟದ ಡಬ್ಬಿ ಹಿಡಿದುಕೊಂಡು ಶಾಲೆಗೆ ಬಂದರು. ಅವರ ಸಂತೋಷಕ್ಕೆ ಮಿತಿಯೇ ಇರಲಿಲ್ಲ, ಎಂದಿನಂತೆ ಶಾಲೆಯಲ್ಲಿ ಎಲ್ಲರೂ ಕೂಡಿಕೊಂಡು ಪರಿಪಾಠ ಕಾರ್ಯಕ್ರಮ ಮುಗಿಸಿದರು. 'ಮಕ್ಕಳೇ, ಇಂದು ನಾವು ಆಲೆಮನೆ ನೋಡಲು ಸೋಮನ ಗೌಡರ ತೋಟಕ್ಕೆ ಹೋಗೋಣ', ಎಂದು ಗುರುಗಳು ಹೇಳಿದರು. ಹಾಗೆಯೇ' ದಾರಿಯಲ್ಲಿ ಎಲ್ಲರೂ ಶಿಸ್ತಿನಿಂದ ಹೋಗಬೇಕು. ಯಾರೂ ಜಗಳಾಡಬಾರದು, ಗದ್ದಲ ಮಾಡಬಾರದು. ತೋಟದಲ್ಲಿ ಅನುಚಿತವಾಗಿ ವರ್ತಿಸಬಾರದು. ಹಳ್ಳ ಮತ್ತು ಬಾವಿಯ ಕಡೆಗೆ ಹೋಗಬಾರದು. ಗಿಡಮರಗಳನ್ನು ಹತ್ತಬಾರದು. ಯಾವುದೇ ಕಾರಣಕ್ಕೂ ನಮ್ಮಿಂದಾಗಿ ತೋಟಿಗನ ಮನಸ್ಸಿಗೆ ನೋವಾಗಬಾರದು', ಎಂದು ಸೂಚನೆ ನೀಡಿದರು.

ಗುರುಗಳು ಹೇಳಿದಂತೆ ವರ್ಗದ ಎಲ್ಲ ಮಕ್ಕಳು ಕೂಡಿಕೊಂಡು ಇರುವೆಗಳಂತೆ ಸಾಲು-ಸಾಲಾಗಿ ಅತೀ ಶಿಸ್ತಿನಿಂದ ದಾರಿಯಲ್ಲಿ ನಡೆದರು. ದಾರಿಯಲ್ಲಿ ಬೇರೆ ಬೇರೆ ಪ್ರಕಾರದ ಪ್ರಾಣಿ, ಪಕ್ಷಿ, ಗಿಡಮರಗಳನ್ನು ನೋಡಿ ಆನಂದಪಟ್ಟರು. ಹಾಡುತ್ತ, ಜಯ ಘೋಷಗಳನ್ನು ಹೇಳುತ್ತ ತೋಟಕ್ಕೆ ಬಂದರು.

ಶಾಲೆಯ ಮಕ್ಕಳನ್ನು ಕಂಡು ಸೋಮನಗೌಡರು ಎದ್ದು ಬಂದು ಮಕ್ಕಳನ್ನು ಹಾಗೂ ಗುರುಗಳನ್ನು ಆದರದಿಂದ ಬರಮಾಡಿಕೊಂಡರು. ವಿಶಾಲವಾದ ಮಾವಿನ ಮರದ ಕೆಳಗೆ ಚಾಪೆಯನ್ನು ಹಾಸಿ ಅವರನ್ನು ಕೂಡ್ರಿಸಿದರು. ಗೌಡರು ಎಲ್ಲರಿಗೂ ಕಬ್ಬಿನ ಹಾಲು ಹಾಗೂ ತಿನ್ನಲು ಕೆನೆಬೆಲ್ಲವನ್ನು ಕೊಟ್ಟರು. ಮಕ್ಕಳೆಲ್ಲರು ಅದನ್ನು ಸೇವಿಸಿ ಖುಷಿಪಟ್ಟರು.

**ಶಾರದಾ** : ಗುರುಗಳೇ, ಈ ಬೆಲ್ಲ ಹೇಗೆ ತಯಾರಾಗುತ್ತದೆ ?

**ಗುರುಗಳು** : ಶಾರದಾ, ನಾವು ಇಲ್ಲಿಗೆ ಬಂದದ್ದು ಅದನ್ನೇ ತಿಳಿದುಕೊಳ್ಳಲು. ಈ ವಿಷಯವನ್ನು ಸ್ವತ: ಸೋಮನಗೌಡರೇ ನಿಮಗೆ ಹೇಳುತ್ತಾರೆ, ಕೇಳಿರಿ. ನಮಸ್ಕಾರ ಗೌಡರೇ, ದಯವಿಟ್ಟು ನಮ್ಮ ಮಕ್ಕಳಿಗೆ ಬೆಲ್ಲ ತಯಾರಾಗುವ ವಿಧಾನವನ್ನು ತಿಳಿಸಿರಿ.

ಸೋಮನಗೌಡರು : ನೀವೆಲ್ಲರೂ ಹೀಗೆ ಬನ್ನಿರಿ (ಗೌಡರು ಮಕ್ಕಳನ್ನು ಕರೆದುಕೊಂಡು ಆಲೆಮನೆ ಹತ್ತಿರ ಬಂದರು) ಅದೋ ನೋಡಿರಿ, ಅಲ್ಲಿ ಹಚ್ಚಹಸಿರಾದ ಗದ್ದೆ ಕಾಣುತ್ತಿದೆಯಲ್ಲ, ಅದು ಕಬ್ಬಿನ ಗದ್ದೆ. ಇಲ್ಲಿದೆಯಲ್ಲ ಕಬ್ಬು ಇದನ್ನು ಅಲ್ಲಿಂದಲೇ ತರಲಾಗಿದೆ.

ವಿಶಾಲ : ತಾತ ಅಲ್ಲಿ ಕಬ್ಬು ಹಚ್ಚ ಹಸಿರಾಗಿ ಕಾಣುತ್ತಿದೆಯಲ್ಲ ?

ಸೋಮನಗೌಡರು : ಹೌದು, ಅದನ್ನು ಕತ್ತರಿಸಿ, ಅದರ ತಪ್ಪಲು ತೆಗೆದು ಮುಂಭಾಗದ ಹಸಿರಾದ ವಾಡಿಯನ್ನು ಕಡಿದು ಇಲ್ಲಿಗೆ ತರುತ್ತೇವೆ. ಇದೋ ನೋಡಿ ಇದು ಕ್ರಶರ್. ಇದರಲ್ಲಿ ಎರಡು ಹರುಕುಬುರುಕಾದ ರೋಲರ್‌ಗಳಿವೆ. ರೋಲರ್‌ಗಳ ನಡುವೆ ಕಬ್ಬು ಬಂದಾಗ ಅದು ನುಜುಗಾಗುತ್ತದೆ. ಕಬ್ಬಿನಲ್ಲಿಯ ರಸವೆಲ್ಲ ಕೆಳಗೆ ಬೀಳುತ್ತದೆ. ಸಿಪ್ಪೆ ಮಾತ್ರ ಹೊರಗೆ ಬರುತ್ತದೆ. ರಸವು ಕೆಳಗಿನ ಹೌದಿನಲ್ಲಿ ಸಂಗ್ರಹವಾಗುತ್ತದೆ.

ಜಾನ : ಅಜ್ಜಾ, ಈ ರಸದಿಂದ ಏನು ಮಾಡುತ್ತಾರೆ ?

ಸೋಮನಗೌಡರು : ರಸವೆಲ್ಲ ಯಂತ್ರದ ಸಹಾಯದಿಂದ ಈ ಕಡಾಯಿಯಲ್ಲಿ ಹಾಕುತ್ತೇವೆ. ರಸವನ್ನು ಚೆನ್ನಾಗಿ ಕುದಿಸುತ್ತೇವೆ. ಆಗ ಇದು ಗಟ್ಟಿಯಾಗುತ್ತದೆ.

ಪರವಿನ : ಈ ರಸವು ಕಾಯ್ದು ಗಟ್ಟಿಯಾಗುತ್ತದೆಯೆ ಅಜ್ಜಾ ?

ಸೋಮನಗೌಡರು : ಹೌದು, ಈ ರಸವು ಕುದಿಯುತ್ತ, ಕುದಿಯುತ್ತ ಗಟ್ಟಿಯಾಗುತ್ತದೆ. ಗಟ್ಟಿಯಾಗುತ್ತಲೇ ಇದನ್ನು ಮಡಿಯಲ್ಲಿ ಹಾಕುತ್ತಾರೆ.

ಯುವರಾಜಸಿಂಗ : ಅಜ್ಜಾ, ಕೈ ಸುಡುವುದಿಲ್ಲವೇ ?

ಸೋಮನಗೌಡರು : ಹೌದು, ಅಪಾಯಕಾರಿ ಕೆಲಸ. ಇದನ್ನು ಬಹಳ ಜಾಗರೂಕತೆಯಿಂದ ಮಾಡುತ್ತಾರೆ. ಮಡಿಯಲ್ಲಿರುವಾಗ ರಸವು ಗಾಳಿಗೆ ತಣ್ಣಗಾಗುತ್ತ ಬರುತ್ತದೆ. ಆಗ ಇದರ ಮೇಲೆ ಕೆನೆ ಬರುತ್ತದೆ. ಇದಕ್ಕೆ ಕೆನೆಬೆಲ್ಲ ಅನ್ನುತ್ತಾರೆ.

ಐಶ್ವರ್ಯಾ : ಅಜ್ಜಾ, ಈ ಮೊದಲು ನಾವು ತಿಂದದ್ದು ಕೆನೆಬೆಲ್ಲವೇನು?

ಸೋಮನಗೌಡರು : ಹೌದು. ಕೆನೆಬೆಲ್ಲವೇ ಇತ್ತು. ನಂತರ ಇದನ್ನು ನಮಗೆ ಬೇಕಾದ ಆಕಾರದ ಅಚ್ಚುಗಳಲ್ಲಿ ತುಂಬುತ್ತೇವೆ. ಈ ರೀತಿ ಬೆಲ್ಲವು ತಯಾರಾಗುತ್ತದೆ.

ಜಾನ : ಅಜ್ಜಾ! ಇದು ಬಹಳ ಕಷ್ಟದ ಕೆಲಸ.

ಸೋಮನಗೌಡರು : ರೈತರು ಮಾಡುವ ಕೆಲಸಗಳೆಲ್ಲಾ ಬಹಳ ಕಷ್ಟದ ಕೆಲಸಗಳೇ ಆಗಿರುತ್ತವೆ. 'ಕೈಕೆಸರಾದರೆ ಬಾಯಿ ಮೊಸರು' ಎಂಬ ಗಾದೆ ಶ್ರಮದ ಮಹತ್ವವನ್ನು ತಿಳಿಸುತ್ತದೆ.

ಗುರುಗಳು : ಮಕ್ಕಳೇ, ಪ್ರತಿಯೊಬ್ಬರು ಕಷ್ಟಪಟ್ಟು ದುಡಿದರೆ ಮಾತ್ರ ಫಲ ಸಿಗುತ್ತದೆ.

ಸೋಮನಗೌಡರು : ನೀವು ಕೂಡಾ ಕಷ್ಟಪಟ್ಟು ಅಭ್ಯಾಸಮಾಡಿದರೆ ನಿಮಗೂ ನಿಮ್ಮ ಕೆಲಸದಲ್ಲಿ ಒಳ್ಳೆಯ ಫಲ ಸಿಗುತ್ತದೆ. ಈಗ ನಿಮಗೆಲ್ಲ ಬೆಲ್ಲ ತಯಾರಾಗುವ ವಿಧಾನ ತಿಳಿಯಿತೇ ?

ವಿನೋದ : ತಿಳಿಯಿತು, ಅಜ್ಜಾ, ಕಬ್ಬಿನಿಂದ ಬೆಲ್ಲ ತಯಾರಿಸುವ ಬಗ್ಗೆ ನಮಗೆ ತಿಳಿಯಿತು.

ಗುರುಗಳು : ಧನ್ಯವಾದಗಳು ಸೋಮನಗೌಡರೇ. ನಿಮ್ಮಿಂದ ತುಂಬ ಉಪಕಾರವಾಯಿತು. ನಾವಿನ್ನು ಹೋಗಿಬರುತ್ತೇವೆ. ನಮಸ್ಕಾರ.

ಸೋಮನಗೌಡರು : ನಮಸ್ಕಾರ ಗುರುಗಳೇ. ಎಲ್ಲರೂ ಕಬ್ಬು, ರಸ ಮತ್ತು ಬೆಲ್ಲ ನಿಮ್ಮ ನಿಮ್ಮ ಮನೆಗೂ ತೆಗೆದುಕೊಂಡು ಹೋಗಿರಿ.

ಗುರುಗಳು : ಆಗಲಿ ಗೌಡರೆ.

ಸಾಯಂಕಾಲದ ಸಮಯವಾಯಿತು. ಎಲ್ಲ ಮಕ್ಕಳು ತಲಾ ಒಂದೊಂದು ಕಬ್ಬನ್ನು ತೆಗೆದುಕೊಂಡರು. ಮತ್ತೆ ಸಾಲು ಸಾಲಾಗಿ ಅತೀ ಶಿಸ್ತಿನಿಂದ ಮರಳಿ ಮನೆಗೆ ಬಂದರು.

**ಶಬ್ದಗಳ ಅರ್ಥ**

ಆಲೆಮನೆ – ಬೆಲ್ಲ ತಯಾರಿಸುವ ಸ್ಥಳ; ಗದ್ದೆ – ತೋಟ; ಕ್ರಶರ್ – ಕಬ್ಬುನುರಿಸುವ ಯಂತ್ರ; ತಲಾ – ಪ್ರತಿಯೊಂದು

***ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.**

ಸೂಚನೆ __________ ; ವಿಧಾನ __________ ; ಜಾಗರೂಕತೆ __________

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ದಾರಿಯಲ್ಲಿ ಯಾವ ರೀತಿ ಹೋಗಬೇಕೆಂದು ಗುರುಗಳು ಹೇಳಿದರು ?

______________________________

ಆ) ಮಕ್ಕಳು ದಾರಿಯಲ್ಲಿ ಏನೇನು ನೋಡಿದರು ?

______________________________

ಇ) ಗೌಡರು ಎಲ್ಲರಿಗೂ ಏನು ಕೊಟ್ಟರು ?

______________________________

**ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

**ಅ)** ______________________

**ಉತ್ತರ** ______________________

**ಆ)** ______________________

**ಉತ್ತರ** ______________________

**ಪ್ರಶ್ನೆ ೩) ಕೆಳಗಿನ ಮಾತುಗಳನ್ನು ಯಾರು-ಯಾರಿಗೆ ಹೇಳಿದರು.**

ಅ) ಯಾವುದೇ ಕಾರಣಕ್ಕೂ ನಮ್ಮಿಂದ ತೋಟಿಗನ ಮನಸ್ಸಿಗೆ ನೋವಾಗಬಾರದು.

______________________________

ಆ) ಅಜ್ಜಾ, ಈ ರಸದಿಂದ ಏನು ಮಾಡುತ್ತಾರೆ ?

______________________________

ಇ) ಅಜ್ಜಾ, ಈ ಮೊದಲು ನಾವು ತಿಂದದ್ದು ಕೆನೆಬೆಲ್ಲವೇನು ?

ಈ) ರೈತರು ಮಾಡುವ ಕೆಲಸಗಳೆಲ್ಲ ಬಹಳ ಕಷ್ಟದ ಕೆಲಸಗಳೆ ?

ಉ) ಪ್ರತಿಯೊಬ್ಬರು ಕಷ್ಟಪಟ್ಟು ದುಡಿದರೆ ಮಾತ್ರ ಫಲ ಸಿಗುತ್ತದೆ.

**ಪ್ರಶ್ನೆ ೪) ಬಿಟ್ಟ ಸ್ಥಳಗಳನ್ನು ತುಂಬಿರಿ.**

ಅ) ಅವರ .................. ಮಿತಿಯೇ ಇರಲಿಲ್ಲ.
ಆ) .................. ಗಳಂತೆ ಸಾಲುಸಾಲಾಗಿ ಅತಿ ಶಿಸ್ತಿನಿಂದ ನಡೆದರು.
ಇ) ಮಕ್ಕಳೆಲ್ಲರೂ ಅದನ್ನು ಸೇವಿಸಿ ..................
ಈ) .................. ಬಾಯಿ ಮೊಸರು.
ಉ) ಈಗ ನಿಮಗೆಲ್ಲ .................. ತಯಾರಾಗುವ ವಿಧಾನ ತಿಳಿಯಿತೆ ?

**ಉಪಕ್ರಮ :** ಕೋಳಿಸಾಕಾಣಿಕೆ ಕೇಂದ್ರಕ್ಕೆ ಭೇಟಿ ನೀಡಿ ಆ ಕುರಿತು ಮಾಹಿತಿ ಸಂಗ್ರಹಿಸಿರಿ.

## ರೈತನೇ ರಾಷ್ಟ್ರದ ಬೆನ್ನೆಲುಬು



# ೧೩ ನಮ್ಮ ಅಪ್ಪ

ಅಪ್ಪನು ಅಂದರೆ
ಅಳಿಸದ ಪ್ರೀತಿ
ಸಂತಸ ತಂದಿದೆ
ಅಪ್ಪನ ಖ್ಯಾತಿ

ವಿದ್ಯಾ ಬುದ್ಧಿಯ
ಭಾಗ್ಯವ ಕೊಟ್ಟ
ಒಳ್ಳೆಯ ದಾರಿಯ
ತೋರಿಸಿ ಬಿಟ್ಟ

ಅಪ್ಪಗೆ ದೊರೆಯಿತು
ಹಿರಿತನ ಪಟ್ಟ
ಮೆಚ್ಚುವ ತೆರದಲಿ
ತೀರ್ಪನು ಕೊಟ್ಟ

ಊರಿನ ಏಳ್ಗೆಗೆ
ಸ್ವಾರ್ಥವ ಬಿಟ್ಟ
ದೇಶದ ಸೇವೆಗೆ
ಖಾದಿಯ ತೊಟ್ಟ

ಅಪ್ಪನ ಮಾತಿಗೆ
ಮನ್ನಣೆ ಹೆಚ್ಚು
ಅಪ್ಪನು ಅಂದರೆ
ನಮಗಿದೆ ಮೆಚ್ಚು.

- ಎಂ.ಎಂ. ಸಂಗಣ್ಣವರ



**ಶಬ್ದಗಳ ಅರ್ಥ**

ಅಳಿಸದ - ನಶಿಸದ; ಹಿರಿತನ - ದೊಡ್ಡತನ; ಮೆಚ್ಚು - ಒಪ್ಪಿಕೊಳ್ಳು.

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಯಾವುದು ಸಂತಸ ತಂದಿದೆ?

______________________

ಆ) ತಂದೆಯು ಯಾವ ದಾರಿ ತೋರಿಸಿಕೊಟ್ಟನು ?

______________________

ಇ) ತಂದೆ ಏತಕ್ಕಾಗಿ ಸ್ವಾರ್ಥವ ಬಿಟ್ಟ ?

______________________

**ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

**ಅ)** ______________________

**ಉತ್ತರ** ______________________

**ಆ)** ______________________

**ಉತ್ತರ** ______________________

**ಪ್ರಶ್ನೆ ೩) ಕೆಳಗಿನ ಪದ್ಯದ ಸಾಲುಗಳನ್ನು ಪೂರ್ಣಮಾಡಿರಿ.**

೧) ಅಪ್ಪಗೆ ದೊರೆಯಿತು .........

....................................

....................................

............ ತೀರ್ಪನು ಕೊಟ್ಟ

**ಪ್ರಶ್ನೆ ೪) ಕೆಳಗಿನವುಗಳಿಗೆ ವಿರುದ್ಧಾರ್ಥಕ ಶಬ್ದಗಳನ್ನು ಬರೆಯಿರಿ.**

ಹಿರಿ x ................ ಸ್ವಾರ್ಥ x ................

ಏರು x ................ ಖ್ಯಾತಿ x ................

**ಉಪಕ್ರಮ :** ತಂದೆ ಮತ್ತು ತಾಯಿಯ ವಾತ್ಸಲ್ಯದ ಕತೆಗಳನ್ನು ಶಿಕ್ಷಕರಿಂದ/ಪಾಲಕರಿಂದ ಕೇಳಿ ತಿಳಿದುಕೊಳ್ಳಿರಿ.

**ಮಾತೃದೇವೋಭವ, ಪಿತೃದೇವೋಭವ**



ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು
ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - ೪

कन्नड सुगमभारती इयत्ता ६ वी ₹ 27.00

